ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

30 ಜೂನ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 111 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ನಮ್ಮ ಯೋಧರು ಹುತಾತ್ಮರಾಗಿಲ್ಲವೆಂದು ಸಂಸತ್ತಿಗೆ ಸುಳ್ಳು ಹೇಳಿರುವ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ರಾಜೀನಾಮೆ ನೀಡಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಕ್ಷಮೆ ಯಾಚಿಸಬೇಕೆಂದು ಕಾಂಗ್ರೆಸ್ ಸೋಮವಾರ ಆಗ್ರಹಿಸಿದೆ.



ಸಹ್ಯಾದ್ರಿಯ ಮಡಿಲಲ್ಲಿ ಸಿಂಹಸ್ಥ ಕುಂಭಮೇಳ ! » 2



ಭಾರತ-ಚೀನಾ ಎಲ್ಎಸಿ ಪರಿಸ್ಥಿತಿ ಸ್ಥಿರ » 3



ಬಿಎಲ್ಒಗಳ ಜೊತೆ ನಿರಂತರ ಸಂಪರ್ಕದಲ್ಲಿರಿ » 4

## ಐಐಟಿಗೆ ಭೂಸ್ವಾಧೀನ: ಕೋರ್ಟ್ ಆದೇಶದಂತೆ ಪರಿಹಾರ

### ಸಂತ್ರಸ್ತ ರೈತರೊಂದಿಗೆ ಸಭೆ | ನ್ಯಾಯಸಮ್ಮತ ಕ್ರಮದ ಭರವಸೆ ನೀಡಿದ ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ

**ಬೆಂಗಳೂರು:** ಹಾಸನದಲ್ಲಿ ಉದ್ದೇಶಿತ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಯೋಜನೆಗಾಗಿ ಭೂಮಿ ಕಳೆದುಕೊಂಡ ರೈತರಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ನೀಡಲಾಗುವುದೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭರವಸೆ ನೀಡಿದರು.

ಸೋಮವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಹಾಸನ ಜಿಲ್ಲೆಯ ದೊಡ್ಡಹೊನ್ನೇನಹಳ್ಳಿ, ಕಾಚನಾಯಕನಹಳ್ಳಿ ಸೇರಿ ಏಳು ಗ್ರಾಮಗಳ ಭೂಸಂತ್ರಸ್ತ ರೈತರ ಅಹವಾಲುಗಳನ್ನು ಆಲಿಸಿದ ಅವರು, ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾನೂನುಬದ್ಧ ಹಾಗು ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಸಭೆಯಲ್ಲಿ ಸಂಸದ ಶ್ರೇಯಸ್ ಪಟೇಲ್, ಶಾಸಕ ಕೆ.ಎಂ.ಶಿವಲಿಂಗೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಹಾಗು ಯೋಜನೆ ವ್ಯಾಪ್ತಿಯ ರೈತರು ಭಾಗವಹಿಸಿದ್ದರು.



**ಐಐಟಿ ನೆಪದಲ್ಲಿ ಭೂ ಕಬಳಿಕೆ ಆರೋಪ**

ಸಭೆಯಲ್ಲಿ ಮಾತನಾಡಿದ ರೈತರು, ಐಐಟಿ ಹೆಸರಿನಲ್ಲಿ ತಮ್ಮ ಭೂಮಿಯನ್ನು ಸ್ವಾಧೀನಪಡಿಸಿ ಕೊಂಡು ಬಳಿಕ ಯೋಜನೆ ಜಾರಿಯಾಗದೆ, ಭೂಮಿ ಕಬಳಿಸಲು ಯತ್ನಿಸಲಾಗಿದೆ ಎಂದು ಆರೋಪಿಸಿದರು. ಮೊದಲು 334 ಎಕರೆ ಭೂಮಿ ಅಗತ್ಯವಿದೆ ಎಂದವರು ನಂತರ 1,057 ಎಕರೆ ಎಂದು ವಿಸ್ತರಿಸಿದರು. ಅಂತಿಮವಾಗಿ ಐಐಟಿ ಧಾರವಾಡಕ್ಕೆ ಹೋಗಿದೆ. ಆದರೂ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿದಿದ್ದು, ನಮ್ಮ ಜಮೀನುಗಳನ್ನು ಮರಳಿ ನೀಡಿಲ್ಲ. ಭೂಸ್ವಾಧೀನದ ಹಿಂದೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಕುಮ್ಮಕ್ಕು ಇದೆ. ನಿವೇಶನವೂ ಇಲ್ಲ, ಪರಿಹಾರವೂ ಸಿಗುತ್ತಿಲ್ಲವೆಂದು ದೂರಿದರು

**ಪರಿಹಾರ ಕಾಗದದಲ್ಲಷ್ಟೇ**

ಎರಡು ದಶಕಗಳಿಂದ ಸಮಸ್ಯೆ ಎದುರಿಸುತ್ತಿದ್ದೇವೆ. ವರ್ಷಕ್ಕೆ ಎರಡು ಬಾರಿ ಪರಿಹಾರ ಪಡೆಯಲು ನೋಟೀಸ್ ಕಳುಹಿಸುತ್ತಾರೆ. ಆದರೆ ಕಚೇರಿಯಿಂದ ಕಚೇರಿಗೆ ಅಲೆದಾಡಿಸಿದರೂ ಪರಿಹಾರ ನೀಡುವುದಿಲ್ಲವೆಂದು ರೈತರು ಅಳಲು ತೋಡಿಕೊಂಡರು. ನಿವೇಶನ ಕೇಳಿದರೆ ನಿವೇಶನ ಲಭ್ಯವಿಲ್ಲ ಎನ್ನುತ್ತಾರೆ. ಪರಿಹಾರ ಪಡೆಯಲು ಕರೆಯುತ್ತಾರೆ. ಆದರೆ, ಹಣವನ್ನೂ ನೀಡಿಲ್ಲ. ಎಲ್ಲವೂ ಕಾಗದದಲ್ಲೇ ಉಳಿದಿದೆ ಎಂದು ಭೂಸಂತ್ರಸ್ತರು ಅಸಮಾಧಾನ ವ್ಯಕ್ತಪಡಿಸಿದರು.

> ಹಾಸನಕ್ಕೆ ಐಐಟಿ ಬಂದರೆ 350 ಎಕರೆ ಭೂಮಿ ಕೊಡಿಸಲು ರೈತರ ಮನವೊಲಿಸುತ್ತೇವೆ. ಆದರೆ, ಐಐಟಿ ಹೆಸರಿನಲ್ಲಿ ರೈತರಿಗೆ ಅನ್ಯಾಯ ಆಗಬಾರದು.
>
> - ಕೆ.ಎಂ.ಶಿವಲಿಂಗೇಗೌಡ, ಗೃಹಮಂಡಳಿ ಅಧ್ಯಕ್ಷ

**ಜಮೀನು ವಾಪಾಸ್ ಕೊಡಿ**

2007ರಲ್ಲಿ ಎಕರೆಗೆ 15 ರಿಂದ 25 ಲಕ್ಷ ರೂ. ಪರಿಹಾರ ನಿಗದಿಪಡಿಸಲಾಗಿತ್ತು. ಈಗ ಆ ಪ್ರದೇಶದಲ್ಲಿ ಭೂಮಿಯ ಮೌಲ್ಯ ಕೋಟ್ಯಾಂತರ ರೂ.ಗೆ ಏರಿಕೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಳೆಯ ದರದ ಪರಿಹಾರ ಸ್ವೀಕರಿಸಲು ಸಾಧ್ಯವಿಲ್ಲ. ಪರಿಹಾರ ಅಥವಾ ನಿವೇಶನ ಬೇಡ, ನಮ್ಮ ಜಮೀನನ್ನು ಡಿನೋಟಿಫೈ ಮಾಡಿ ಮರಳಿ ನೀಡಿ ಎಂದು ಒತ್ತಾಯಿಸಿದ ರೈತರು, ಭೂಸ್ವಾಧೀನ ಜಾಗದ ಪಕ್ಕದಲ್ಲೇ ಕೆಲವು ಕೈಗಾರಿಕೆಗಳು ಆರಂಭಿಸಲು ಯತ್ನ ನಡೆಯುತ್ತಿದ್ದು, ಅದರ ಹಿಂದೆ ರಾಜಕೀಯ ಪ್ರಭಾವವಿದೆ ಎಂದು ಆರೋಪಿಸಿದರು.

**50:50 ಹಂಚಿಕೆ ಜಾರಿಯಾಗಿಲ್ಲ**

ನ್ಯಾಯಾಲಯದ ನಿರ್ದೇಶನದಂತೆ ಅಭಿವೃದ್ಧಿ ಪಡಿಸಿದ ಭೂಮಿಯನ್ನು 50:50 ಅನುಪಾತದಲ್ಲಿ ಹಂಚಿಕೆ ಮಾಡಬೇಕಿತ್ತು. ಆದರೆ, ಅದನ್ನು ಜಾರಿಗೊಳಿಸಿಲ್ಲವೆಂದು ರೈತರು ತಿಳಿಸಿದರು.

ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಅಧಿಕಾರಿಗಳು ವಾಸ್ತವಾಂಶಗಳನ್ನು ವಿವರಿಸಿದ್ದಾರೆ. ಮತ್ತೊಂದು ಸುತ್ತಿನ ಚರ್ಚೆ ನಡೆಸಿ, ಕಾನೂನುಬದ್ಧ ಪರಿಹಾರ ಮಾರ್ಗ ಕಂಡುಹಿಡಿಯಲಾಗುವುದು. ಸರ್ಕಾರ ರೈತರ ಹಿತಾಸಕ್ತಿಯನ್ನು ಕಾಪಾಡಲು ಬದ್ಧವಾಗಿದೆ ಎಂದು ಭರವಸೆ ನೀಡಿದರು.

ರೈತರ ಅಹವಾಲು ಆಲಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಅಧಿಕಾರಿಗಳಿಂದ ನಕ್ಷೆ ಹಾಗು ದಾಖಲೆಗಳನ್ನು ತರಿಸಿ ಪರಿಶೀಲನೆ ನಡೆಸಿದರು. ನಾನು ಬಿಡದಿ ರೈತರಿಗೆ ಒಂದು ನ್ಯಾಯ, ಹಾಸನದ ರೈತರಿಗೆ ಮತ್ತೊಂದು ನ್ಯಾಯ ಮಾಡುವುದಿಲ್ಲ. ರೈತರ ಕೈಗೆ ಹೆಚ್ಚು ಹಣ ಬಂದರೆ ನನಗೆ ಸಂತೋಷ. ಸರ್ಕಾರ ಸದಾ ರೈತರ ಪರವಾಗಿರುತ್ತದೆ ಎಂದು ಹೇಳಿದರು.

ಈ ಪ್ರಕರಣದ ಎಲ್ಲಾ ಆಯಾಮಗಳನ್ನು ಪರಿಶೀಲಿಸಿ, ನ್ಯಾಯಾಲಯದ ಆದೇಶ, ಭೂಸ್ವಾಧೀನ ಪ್ರಕ್ರಿಯೆ ಹಾಗು ಬಾಕಿ ಇರುವ ವಿಷಯಗಳನ್ನು ಕಾನೂನುಬದ್ಧ ಮತ್ತು ನ್ಯಾಯಸಮ್ಮತ ರೀತಿಯಲ್ಲಿ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

## ಮತದಾರರ ಪಟ್ಟಿಯಲ್ಲಿ ಹೆಸರು ಪರಿಶೀಲಿಸಿಕೊಳ್ಳಿ : ಹೆಚ್.ಡಿ.ರೇವಣ್ಣ



• ಪ್ರಜೋದಯ ವರದಿ

**ಹೊಳೆನರಸೀಪುರ:** ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಪ್ರತಿಯೊಬ್ಬರು ಕಡ್ಡಾಯವಾಗಿ ಪರಿಶೀಲಿಸಿಕೊಳ್ಳಬೇಕು. ಬಿಎಲ್ಎಗಳಿಗೆ ಅಗತ್ಯ ಮಾಹಿತಿಯನ್ನು ನೀಡಿ ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ಕಾರ್ಯಕ್ಕೆ ಸಹಕರಿಸಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಕೋರಿದರು.

ಪಟ್ಟಣದಲ್ಲಿ ಸೋಮವಾರ ಜೆಡಿಎಸ್ ವತಿಯಿಂದ ಹಮ್ಮಿಕೊಂಡಿದ್ದ ಬಿಎಲ್ಎಗಳ ಕಾರ್ಯ ಹಾಗು ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತಂತೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿಯಿಂದ ಯಾರೊಬ್ಬರು ಹೊರ ಗುಳಿಯದಂತೆ ನೋಡಿಕೊಳ್ಳಲು ಪಕ್ಷದ ಕಾರ್ಯಕರ್ತರು, ಮುಖಂಡರು ಸಾರ್ವಜನಿಕರಿಗೆ ಅಮಾಹಿತಿ ನೀಡಬೇಕೆಂದು ತಿಳಿಸಿದರು.

ಹೊಳೆನರಸೀಪುರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಸದಾ ಆದ್ಯತೆ ನೀಡಲಾಗಿದೆ. ಕ್ಷೇತ್ರದಲ್ಲಿ ಅತೀ ಹೆಚ್ಚು ಪ್ರಥಮ ದರ್ಜೆ ಕಾಲೇಜುಗಳು ಹಾಗು ಪಾಲಿಟೆಕ್ನಿಕ್ ಕಾರ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಅವಧಿಯಲ್ಲಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳು ನಡೆದಿವೆ ಎಂದು ಸ್ಮರಿಸಿದರು.

ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಯಂತ್ರಗಳು ಹಾಗು ಅತ್ಯಾಧುನಿಕ ಐಸಿಯು ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಸಾರ್ವಜನಿಕರು ಅವುಗಳ

» ನಾಲ್ಕನೇ ಪುಟದಲ್ಲಿ

## ಗ್ಯಾರಂಟಿ ಅನುಷ್ಠಾನ ಸಮಿತಿ ರದ್ದುಪಡಿಸಲು ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಅಧಿಕಾರದಾಸೆಗೆ ಪಂಚ ಗ್ಯಾರಂಟಿಗಳನ್ನು ಘೋಷಿಸಿದ ಕಾಂಗ್ರೆಸ್ ಜನರ ತೆರಿಗೆ ದುಡ್ಡನ್ನು ಪೋಲು ಮಾಡುತ್ತಿದೆ. ಅನರ್ಹರ ಪತ್ತೆ ಹೆಸರಿನಲ್ಲಿ ಜನರಿಗೆ ತೊಂದರೆ ನೀಡುವುದಾದರೆ ಯೋಜನೆ ಅನುಷ್ಠಾನಕ್ಕೆ ಸಮಿತಿ ರಚಿಸಿದ್ದು ಏಕೆಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಅವರು ಪ್ರಶ್ನಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳ ಸಮರ್ಪಕ ಜಾರಿಗಾಗಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಿತಿ ರಚಿಸಿ ಅವರಿಗೆ ಭತ್ಯೆ ನೀಡಲಾಗುತ್ತದೆ. ಹಾಗಿದ್ದರೆ ಅವರು ಅನರ್ಹರು, ಮೃತಪಟ್ಟವರ ಮಾಹಿತಿ ನೀಡದೆ ಸುಮ್ಮನಿದಿದ್ದು ಏಕೆ. ಸರ್ಕಾರವೇ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದು ಗಂಭೀರ ಆರೋಪ ಮಾಡಿದರು.

ಗೃಹಲಕ್ಷ್ಮಿ ಯೋಜನೆಯಡಿ 285 ಕೋ.ರೂ. ಅವ್ಯವಹಾರವಾಗಿದೆ ಎಂದು ಸಿಎಜಿ ವರದಿ ಕೊಟ್ಟಿದೆ. ಒಬ್ಬರ ಖಾತೆಗೆ ಕೋಟ್ಯಾಂತರ ರೂಪಾಯಿ ಜಮೆ ಆಗಿದೆ. ಇದೆಲ್ಲಾ ಹೇಗೆ ಸಾಧ್ಯವಾಯಿತೆಂಬುದು ಯಕ್ಷ ಪ್ರಶ್ನೆಯಾಗಿದೆ. ಕಳೆದ ವರ್ಷ 1.24 ಕೋಟಿ ಮಹಿಳೆಯರಿಗೆ ಸೇರಬೇಕಾಗಿದ್ದ ಎರಡು ತಿಂಗಳ 5 ಸಾವಿರ ಕೋ.ರೂ. ಹಣವನ್ನು ಸರ್ಕಾರ ತಕ್ಷಣ ಬಿಡುಗಡೆ ಮಾಡಬೇಕು. ಯಾವ ಖಾತೆಯಲ್ಲಿ 5000 ಕೋಟಿ ಹಣ ಇದೆ ಎಂಬುದನ್ನು ತಿಳಿಸಬೇಕೆಂದು ಒತ್ತಾಯಿಸಿದರು.

ಮೃತಪಟ್ಟ 1.06 ಲಕ್ಷ ಜನರ ಖಾತೆಗೆ 116 ಕೋ.ರೂ. ಜಮೆ ಮಾಡಿರುವ ಈ ಸರ್ಕಾರಕ್ಕೆ ಕನಿಷ್ಟ ಜವಾಬ್ದಾರಿ ಇಲ್ಲ. 19 ಸಾವಿರಕ್ಕೂ

» ನಾಲ್ಕನೇ ಪುಟದಲ್ಲಿ




> ಸರ್ಕಾರವು ನಕಲಿ ಫಲಾನುಭವಿಗಳನ್ನು ಯೋಜನೆಯಿಂದ ಕೈಬಿಡಲು ಎಲ್ಲಾ ಫಲಾನುಭವಿಗಳ ಬಯೋ ಮೆಟ್ರಿಕ್‌ನೊಂದಿಗೆ ಮರು ಅರ್ಜಿ ಸ್ವೀಕರಿಸಲು ಮುಂದಾಗಿರುವುದು ಅವೈಜ್ಞಾನಿಕ ಕ್ರಮ. ಇದರಿಂದ ನಿತ್ಯ ದುಡಿದು ಬದುಕು ನಡೆಸುತ್ತಿರುವವರಿಗೆ ಸಮಸ್ಯೆ ಆಗಲಿದೆ. ಇಲ್ಲಸಲ್ಲದ ನೆಪ ಹೇಳಿ ಜನರಿಗೆ ತೊಂದರೆ ಕೊಡುವುದೇ ಸರ್ಕಾರದ ಉದ್ದೇಶವಾಗಿದೆ.
>
> -ಸಿಮೆಂಟ್ ಮಂಜು, ಶಾಸಕ

## ಶಾಸಕ ಸ್ವರೂಪ್ ನನ್ನ ಪರ ಪ್ರಚಾರ ಮಾಡಬೇಕಾಗುತ್ತೆ

### 2028ರ ವಿಧಾನಸಭೆ ಟಿಕೆಟ್ ತಮಗೇ ಎಂದು ಪ್ರೀತಮ್ ಪರೋಕ್ಷ ಹೇಳಿಕೆ

• ಪ್ರಜೋದಯ ವರದಿ

**ಹಾಸನ:** ಜೆಡಿಎಸ್-ಬಿಜೆಪಿ ಮೈತ್ರಿ ಇರುವುದರಿಂದ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ನನ್ನ ಪರವಾಗಿ ಪ್ರಚಾರಕ್ಕೆ ಬರಬೇಕಾಗುತ್ತದೆ. ಎನ್‌ಡಿಎ ಕುರಿತು ಜನರಲ್ಲಿ ಅಸಹನೆ ಮೂಡದಾಗೆ ಕೆಲಸ ಮಾಡಿ ಎಂದಿರುವ ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅವರು ಹಾಸನ ಕ್ಷೇತ್ರಕ್ಕೆ ತಾವೇ ಅಭ್ಯರ್ಥಿ ಎಂದು ಪರೋಕ್ಷವಾಗಿ ಪ್ರತಿಪಾದಿಸಿದರು.

ನಗರದ ಗುರುರಾಜ ಕಲ್ಯಾಣ ಮಂಟಪದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಬೆಂಗಳೂರಿನಲ್ಲಿ ಮನೆ ಮಾಡಿಕೊಂಡಿದ್ದೇನೆಂದು ಶಾಸಕರು ಹೇಳಿದ್ದಾರೆ. ಬಹುಶ: ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಎ.ಮಂಜು. ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಅವರಿಗೆ ಹೇಳಬೇಕಾಗಿರುವುದನ್ನು ನನಗೆ ಹೇಳಿದ್ದಾರೆ ಅನಿಸುತ್ತದೆ. ನಾನು ಶಾಸಕನಾದ ಮೇಲೆ ಬೆಂಗಳೂರಿನಲ್ಲಿ ಮನೆ ಮಾಡಿಲ್ಲ. ವೃತ್ತಿ, ಸಂಸಾರ, ಸಾಮಾಜಿಕ ಚಟುವಟಿಕೆ ಇರುತ್ತದೆ. ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ಇರುವುದರಿಂದ ಯಾವ ತೊಂದರೆಯೂ ಇಲ್ಲ. ಕ್ಷೇತ್ರದಲ್ಲಿ ಎಷ್ಟು ದಿನ ಇರುತ್ತೇನೆ ಎನ್ನುವುದಲ್ಲ, ಜನರಿಗಾಗಿ ಏನು ಕೆಲಸ ಮಾಡುತ್ತೇನೆ ಎನ್ನುವುದು ಮುಖ್ಯವಾಗುತ್ತದೆ. ಬಿಸಿ ರಕ್ತದ ಯುವಕ ಮಾತನಾಡಿದ್ದಾರೆ, ಮಾತನಾಡಲಿ ಬಿಡಿ ಎಂದು ತಿರುಗೇಟು ನೀಡಿದರು.

ರಾಜ್ಯದಲ್ಲಿ ಎನ್‌ಡಿಎ ಹೊಂದಾಣಿಕೆ ಇದೆ. ಮೈತ್ರಿ ಪಕ್ಷದ ಶಾಸಕರಾಗಿ ಅವರು ಕೆಲಸ ಮಾಡದಿದ್ದರೆ ಅದು ನನ್ನ ಮೇಲೆ ಪರಿಣಾಮ ಬೀರುತ್ತದೆ. ಮುಂದಿನ ಚುನಾವಣೆಯಲ್ಲಿ ಅವರಿಗೆ ಮತ್ತೆ ಸ್ಪರ್ಧೆ ಮಾಡಿ ಎನ್ನುವುದಿಲ್ಲ. 2028ಕ್ಕೆ ಅವರು ನನ್ನ ಪರ ಪ್ರಚಾರ ಮಾಡಬೇಕಾಗುತ್ತದೆ. ಕ್ಷೇತ್ರದ ಕೆಲಸಗಳು ಎನ್‌ಡಿಎ ಪರವಾಗಿ ಇರಬೇಕೆಂದು ಬಯಸುತ್ತೇನೆಂದರು.




> ರಾಜ್ಯಾದ್ಯಂತ ಎಸ್ಐಆರ್ ಪ್ರಕ್ರಿಯೆ ಜು.30ರಿಂದ ಪ್ರಾರಂಭವಾಗಲಿದೆ. ಈಗಾಗಲೇ ಬಿಜೆಪಿಯ ಬೂತ್ ಏಜೆಂಟರಿಗೆ ಹಲವು ಸುತ್ತಿನ ತರಬೇತಿ ನೀಡಲಾಗಿದೆ. ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯಬಾರದೆಂಬುದು ನಮ್ಮ ಉದ್ದೇಶ. ಈ ಪ್ರಕ್ರಿಯೆಯನ್ನು ಮುಂಬರುವ ಎಲ್ಲಾ ಚುನಾವಣೆಗೆ ತಾಲೀಮು ಎಂದು ಭಾವಿಸಿ ಕೆಲಸ ಮಾಡುತ್ತಿದ್ದೇವೆ.
>
> –ಪ್ರೀತಮ್ ಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

**ಜೆಡಿಎಸ್‌ಗೆ 18 ಕ್ಷೇತ್ರ ಸಾಕಾ?**

ಮುಂಬರುವ ಚುನಾವಣೆಯಲ್ಲಿ ಅಭ್ಯರ್ಥಿ ಯಾರೆಂಬುದು ಇನ್ನೂ ತೀರ್ಮಾನವಾಗಿಲ್ಲ. ಸದ್ಯಕ್ಕೆ ನಾನು ಎನ್‌ಡಿಎ ಪ್ರಬಲ ಆಕಾಂಕ್ಷಿಯಾಗಿದ್ದೇನೆ. ವರಿಷ್ಟರು ಇಬ್ಬರನ್ನು ಬಿಟ್ಟು ಮೂರನೇಯವರಿಗೆ ಅವಕಾಶ ಕೊಟ್ಟರೆ ಕೆಲಸ ಮಾಡಬೇಕಾಗುತ್ತದೆ. ಅಭ್ಯರ್ಥಿ ಯಾರು ಎನ್ನುವುದಕ್ಕಿಂತ ಜನರ ಪ್ರೀತಿ ಗಳಿಸುವುದು ಮುಖ್ಯವಾಗುತ್ತದೆ. ಪ್ರೀತಮ್ ಗೌಡರ ಆಳ-ಅಗಲ ಗೊತ್ತಿಲ್ಲದವರು ಏನೇನೋ ಮಾತನಾಡುತ್ತಾರೆ. ನನ್ನ ಶಕ್ತಿ ಏನೆಂಬುದು ಎಲ್ಲರಿಗೂ ಗೊತ್ತಿದೆ. 2023ರಲ್ಲಿ ನಾನು ಬೇಡವೆಂದು ಜನರು ತೀರ್ಮಾನಿಸಿದ್ದರಿಂದ ಸೋಲಬೇಕಾಯಿತು. 2028ರ ಟಿಕೆಟ್

» ನಾಲ್ಕನೇ ಪುಟದಲ್ಲಿ

## ಸಕಲೇಶಪುರ ತಹಶೀಲ್ದಾರ್ ಜೀಪ್ ಡಿಕ್ಕಿ: ಬೈಕ್ ಸವಾರ ಸಾವು

• ಪ್ರಜೋದಯ ವರದಿ

**ಆಲೂರು:** ಸಕಲೇಶಪುರ ತಹಶೀಲ್ದಾರ್ ಅವರ ಜೀಪ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ವ್ಯಕ್ತಿಯೊಬ್ಬರು ಮೃತಪಟ್ಟು, ಮತ್ತೊಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಈಶ್ವರಹಳ್ಳಿ ಕೂಡಿಗೆ ಸರ್ಕಲ್ ಬಳಿ ಸೋಮವಾರ ನಡೆದಿದೆ. ಹಾಸನದ ಪೆನ್‌ಷನ್ ಮೊಹಲ್ಲಾದ ನಿವಾಸಿ ಜಮ್ಶಿದ್ (58) ಮೃತಪಟ್ಟಿದ್ದಾರೆ.

ಕಾರ್ಪೆಂಟರ್ ಕೆಲಸ ಮಾಡುವ ಜಮ್ಶಿದ್ ಹಾಗು ನದೀಮ್ ಬೈಕ್‌ನಲ್ಲಿ ಸಕಲೇಶಪುರದ ಕಡೆಗೆ ಕೆಲಸಕ್ಕೆ ತೆರಳುತ್ತಿದ್ದರು. ಈ ವೇಳೆ ಸಕಲೇಶಪುರ ತಹಶೀಲ್ದಾರ್ ಸುಪ್ರಿತಾ ಅವರಿದ್ದ ಜೀಪ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಜಮ್ಶಿದ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಾಳು ನದೀಮ್ ಅವರನ್ನು ತಹಶೀಲ್ದಾರ್ ಸುಪ್ರಿತಾ ಅವರು ಸಹಾಯಕರ ನೆರವಿನೊಂದಿಗೆ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಹಿಮ್ಸ್‌ನಲ್ಲಿ ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಶಾಸಕ ಸಿಮೆಂಟ್ ಮಂಜು ಅವರು ಹಿಮ್ಸ್‌ಗೆ ಭೇಟಿ ನೀಡಿ, ಮೃತ ಜಮ್ಶಿದ್ ಅವರ ಅಂತಿಮ ದರ್ಶನ ಪಡೆದು ಕುಟುಂಬಕ್ಕೆ ಧೈರ್ಯ ಹೇಳಿದರು. ಬಳಿಕ ಗಾಯಾಳು ಆರೋಗ್ಯ ವಿಚಾರಿಸಿದರು.

ಈ ವೇಳೆ ಮಾತನಾಡಿದ ಅವರು, ಈ ದುರ್ಘಟನೆ ನಡೆಯಬಾರದಿತ್ತು. ಯಾವುದೇ ಅಪಘಾತ ಉದ್ದೇಶಪೂರ್ವಕವಾಗಿ ನಡೆಯುವುದಿಲ್ಲ.

» ನಾಲ್ಕನೇ ಪುಟದಲ್ಲಿ





## ಕೆರೆಗೆ ಉರುಳಿದ ಗೂಡ್ಸ್ ವಾಹನ



**ಅರಸೀಕೆರೆ:** ಗೂಡ್ಸ್ ವಾಹನ ಚಾಲಕನ ನಿಯಂತ್ರಣ ತಪ್ಪಿ ನಗರದ ಹೊರವಲಯದ ಕಂತೇನಹಳ್ಳಿ ದೊಡ್ಡ ಕೆರೆಗೆ ಉರುಳಿ ಬಿದ್ದ ಘಟನೆ ಸೋಮವಾರ ನಡೆದಿದೆ.

ವಾಹನ ತಿಪಟೂರಿನಿಂದ ಅರಸೀಕೆರೆ ಕಡೆಗೆ ಕೆರೆ ಏರಿ ಮೇಲೆ ಬರುತ್ತಿದ್ದ ವೇಳೆ ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಬಿದ್ದಿದೆ. ಅಪಘಾತದ ವೇಳೆ ವಾಹನದಲ್ಲಿದ್ದ ಇಬ್ಬರು ನೀರಿನಲ್ಲಿ ಸಿಲುಕಿಕೊಂಡಿದ್ದರು. ಈ ವೇಳೆ ಸ್ಥಳೀಯ ನಿವಾಸಿ ಮಂಜು ಸಮಯಪ್ರಜ್ಞೆ ಮೆರೆದು ಹಗ್ಗದ ಸಹಾಯದಿಂದ ಕೆರೆಗೆ ಇಳಿದು ಇಬ್ಬರನ್ನೂ ಸುರಕ್ಷಿತವಾಗಿ ಹೊರತೆಗೆದು ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ. ಬಳಿಕ ಗಾಯಾಳುಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಯಿತು. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆಟೋ ಮುಖಾಮುಖಿ: 8 ಮಂದಿಗೆ ಗಾಯ

• ಪ್ರಜೋದಯ ವರದಿ

**ಅರಸೀಕೆರೆ:** ಹುಣ್ಣಿಮೆ ಅಂಗವಾಗಿ ಜೇನುಕಲ್ಲು ಸಿದ್ದೇಶ್ವರಸ್ವಾಮಿ ದರ್ಶನಕ್ಕೆ ತೆರಳುತ್ತಿದ್ದ ಹಾಗು ದರ್ಶನ ಮುಗಿಸಿ ಹಿಂದಿರುಗುತ್ತಿದ್ದ ಎರಡು ಆಟೋಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಎಂಟು ಮಂದಿ ಪ್ರಯಾಣಿಕರು ಹಾಗು ಇಬ್ಬರು ಚಾಲಕರು ಗಾಯಗೊಂಡ ಘಟನೆ ಸೋಮವಾರ ಬೆಳಿಗ್ಗೆ ಯಾದಾಪುರ ಮಾರ್ಗದ ರಸ್ತೆ ತಿರುವಿನಲ್ಲಿ ನಡೆದಿದೆ.

ಬೆಳಿಗ್ಗೆ ಸುಮಾರು 10.30ರ ವೇಳೆಗೆ ಯಾದಾಪುರ ಮಾರ್ಗದ ರಸ್ತೆ ತಿರುವಿನಲ್ಲಿ ಎದುರುಬಂದ ಆಟೋಗಳು ಮುಖಾಮುಖಿ ಡಿಕ್ಕಿ ಹೊಡೆದುಕೊಂಡಿದ್ದು, ಡಿಕ್ಕಿಯ ತೀವ್ರತೆಗೆ ಎರಡೂ ವಾಹನಗಳಲ್ಲಿದ್ದ ಪ್ರಯಾಣಿಕರು ಗಾಯಗೊಂಡರು.



ಸ್ಥಳೀಯರು ಕೂಡಲೇ ಗಾಯಾಳುಗಳನ್ನು ಅರಸೀಕೆರೆ ಸಾರ್ವಜನಿಕ ಜೆ.ಸಿ.ಆಸ್ಪತ್ರೆಗೆ ದಾಖಲಿಸಿದರು. ಆಸ್ಪತ್ರೆಯಲ್ಲಿ ಗಾಯಾಳುಗಳಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದ್ದು, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಅರಸೀಕೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೈ ಕೊಟ್ಟ ಮುಂಗಾರು : ಉಳುಮೆ ಮಾಡಿ ಬೆಳೆ ನಾಶ ಪಡಿಸಿದ ರೈತ



• ಪ್ರಜೋದಯ ವರದಿ

**ಹಾಸನ:** ಮುಂಗಾರು ಮಳೆ ಕೈ ಕೊಟ್ಟಿರುವ ಹಿನ್ನಲೆಯಲ್ಲಿ ಪರ್ಯಾಯ ಬೆಳೆಯತ್ತ ಮುಖ ಮಾಡಿರುವ ರೈತರು ಮುಸುಕಿನ ಜೋಳ ಬೆಳೆ ನಾಶಪಡಿಸುತ್ತಿದ್ದಾರೆ.

ತಾಲ್ಲೂಕಿನ ಸೋಮನಹಳ್ಳಿ ಕಾವಲು ಗ್ರಾಮದ ಶಿವೇಗೌಡ ಎಂಬುವವರು ಟ್ರ್ಯಾಕ್ಟರ್‌ನಿಂದ ಉಳುಮೆ ಮಾಡಿ ಬೆಳೆ ನಾಶಗೊಳಿಸಿದ್ದಾರೆ. ಪೂರ್ವ ಮುಂಗಾರು ಸುರಿಯುವ ನಿರೀಕ್ಷೆಯಲ್ಲಿ ಜೋಳ ಬೆಳೆ ಕೈಗೊಂಡಿದ್ದರು. ಆದರೆ, ಜುಲೈ ತಿಂಗಳು ಸಮೀಪಿಸಿದರೂ ಮಳೆಯಾಗದ ಹಿನ್ನಲೆಯಲ್ಲಿ ಬೆಳೆಗೆ ಬಿಳಿ ಚುಕ್ಕಿ ರೋಗಬಾಧೆ ಕಾಣಿಸಿಕೊಂಡಿದೆ.

ಈಗಾಗಲೇ ಬಿತ್ತನೆಗಾಗಿ ಸಾವಿರಾರು ರೂಪಾಯಿ ಖರ್ಚು ಮಾಡಿ ಬೆಳೆ ಉಳಿಸಿಕೊಳ್ಳಲು ಮತ್ತೆ ಸಾಲ ಮಾಡಬೇಕಾಗುತ್ತದೆ. ಮಳೆ ಬಾರದಿದ್ದರೆ ಭಾರೀ ತೊಂದರೆಗೆ ಸಿಲುಕಬೇಕಾಗುತ್ತದೆಂದು ಈ ನಿರ್ಧಾರಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಮೆಕ್ಕೆ ಜೋಳ ನಾಶ ಮಾಡಿ ಕೋಸು ಅಥವಾ ರಾಗಿ ಬೆಳೆಗೆ ರೈತ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಇದೇ ರೀತಿ ಹಾಸನ ಸುತ್ತಲಿನ ಪ್ರದೇಶಗಳಲ್ಲಿ ಬೆಳೆ ನಾಶ ಪಡಿಸುವ ಕುರಿತು ವರದಿಯಾಗುತ್ತಿದೆ.

### ಮಳೆ ಕೈ ಕೊಟ್ಟರೆ ಪರಿಸ್ಥಿತಿ ಭೀಕರ | ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಚಂದ್ರಶೇಖರ್

## ಕುಡಿಯುವ ನೀರಿನ ಸಮಸ್ಯೆ ಎದುರಿಸಲು ಸಜ್ಜಾಗಿ

• ಪ್ರಜೋದಯ ವರದಿ

**ಅರಕಲಗೂಡು:** ಮುಂಗಾರು ಮಳೆ ಅವಕೃಪೆಯಿಂದ ಜಾನುವಾರುಗಳ ಕುಡಿಯುವ ನೀರಿಗೆ ಸಮಸ್ಯೆಯಾಗುವ ಸಾಧ್ಯತೆ ಇದ್ದು, ಅನಾವೃಷ್ಟಿ ಎದುರಿಸಲು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಹಾಗು ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಎಂ.ಸಿ.ಚಂದ್ರಶೇಖರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೇ ಮತ್ತು ಜೂನ್ ತಿಂಗಳಲ್ಲಿ ಬಿದ್ದ ಅಲ್ಪ ಮಳೆಗೆ ಸಣ್ಣಪುಟ್ಟ ರೈತರು ವಿವಿಧ ಕೃಷಿ ಕೈಗೊಂಡಿದ್ದಾರೆ. ಆದರೆ, ಪೂರಕವಾಗಿ ಮಳೆ ಬೀಳುತ್ತಿಲ್ಲ. ಮುಂದಿನ ದಿನಗಳಲ್ಲಿ ನಿರೀಕ್ಷಿತ ಮಳೆ ಬಿದ್ದರೆ ಕೃಷಿ ಸೇರಿ ಕುಡಿಯುವ ನೀರಿಗೆ ಅನುಕೂಲವಾಗಲಿದೆ ಎಂದರು.



2025-26ನೇ ಸಾಲಿನ ಯೋಜನೆಗಳ ಅನುಷ್ಠಾನ ಸಮರ್ಪಕವಾಗಿ ನಡೆದಿದೆ. 26-27ನೇ ಸಾಲಿನ ಯೋಜನೆ ಆರಂಭಗೊಂಡಿದೆ. ಇಲಾಖಾವಾರು ನಿಗದಿಯಾಗಿರುವ ಅನುದಾನ ಬಳಕೆ ಸಕಾಲಿಕವಾಗಿ ಬಳಕೆಯಾಗಬೇಕಿದೆ. ಕಳೆದ ಸಾಲಿನ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿ ದ್ದರೇ ಕೂಡಲೇ ಪೂರ್ಣಗೊಳಿಸಲು ಕ್ರಮ ವಹಿಸಿ ಎಂದು ನಿರ್ದೇಶನ ನೀಡಿದರು.

**ಸರ್ಕಾರಿ ಶಾಲೆಗಳಿಗೆ ಸೌಲಭ್ಯ ಕಲ್ಪಿಸಿ**

ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ಬಹುತೇಕ ಮಕ್ಕಳು ರೈತರು, ಬಡವರ್ಗದವರಾಗಿದ್ದಾರೆ. ಈ ಮಕ್ಕಳಿಗೆ ಯಾವ ಸಮಸ್ಯೆಯಾಗದಂತೆ ಶಿಕ್ಷಣ, ಇತರ ಸವಲತ್ತು ಕಲ್ಪಿಸಬೇಕು. ಇದು ನಮ್ಮ ಆದ್ಯ ಕರ್ತವ್ಯದಂತೆ ಶಿಕ್ಷಣ ಇಲಾಖೆ ಅಧಿಕಾರಿ, ಶಿಕ್ಷಕರು ತೊಡಗಿಕೊಳ್ಳ ಬೇಕಿದೆ. ಅಗತ್ಯ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ, ಬಿಆರ್‌ಸಿ ಅವರು ಕ್ರಮ ವಹಿಸಬೇಕೆಂದು ಸೂಚನೆ ನೀಡಿದರು.

**ವೈದ್ಯರು, ಸಿಬ್ಬಂದಿ ಕೊರತೆ ವರದಿ ನೀಡಿ**

ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಕುರಿತು ಪ್ರತಿಕ್ರಿಯಿಸಿದ

» ನಾಲ್ಕನೇ ಪುಟದಲ್ಲಿ

**ತಹಶೀಲ್ದಾರ್ ನಡೆಗೆ ರೈತರ ಆಕ್ಷೇಪ**

ರೈತ ಸಂಘದ ಅಧ್ಯಕ್ಷ ಭುವನೇಶ್ ಅವರು ಮಾತನಾಡಿ, ಕಳೆದ ಮೂರು ತಿಂಗಳಿಂದಲೂ ರೈತರ ಕುಂದು ಕೊರತೆ ಸಭೆಯನ್ನು ಕರೆಯದೇ ತಹಸೀಲ್ದಾರ್ ಕಾಲಹರಣ ಮಾಡುತ್ತಿದ್ದಾರೆ. ಇಂದಿನ ಸಭೆ ಕುರಿತು ಯಾವ ಇಲಾಖೆ ಅಧಿಕಾರಿಗಳಿಗೆ ನೋಟೀಸ್ ನೀಡಿಲ್ಲ. ಈ ಬಗ್ಗೆ ಪ್ರಶ್ನೆ ಮಾಡಿದರೆ ಉಢಾಪೆಯಿಂದ ವರ್ತಿಸುತ್ತಾರೆಂದರು.

ತಾಲ್ಲೂಕಿನಲ್ಲಿ ಮೂರು ಏತ ನೀರಾವರಿ ಯೋಜನೆಗಳಿವೆ. ಪ್ರಮುಖವಾಗಿ ಗಂಗನಾಳು ಏತ ನೀರಾವರಿ ಯೋಜನೆ ಮೂಲಕ ನೂರು ದಿನಗಳ ಕಾಲ ನೀರು ಹರಿಸಿ ಕೆರೆಗಳನ್ನು ತುಂಬಿಸಬೇಕಿದೆ. ಕ್ಷೇತ್ರದ

» ನಾಲ್ಕನೇ ಪುಟದಲ್ಲಿ

**ಸಭೆ ಮುಂದೂಡಿಕೆಗೆ ರೈತರ ಆಕ್ರೋಶ**



ರೈತರ ಕುಂದು ಕೊರತೆ ಆಲಿಸಲು ನಿಗದಿಪಡಿಸಿದ್ದ ಸಭೆಯನ್ನು ಸಾಮಾನ್ಯ ಸಭೆಯ ನೆಪ ಹೇಳಿ ಮುಂದೂಡಿದ್ದನ್ನು ಖಂಡಿಸಿ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನಲ್ಲಿ ರೈತರು, ಬಡವರು, ವಿದ್ಯಾರ್ಥಿಗಳಿಗೆ ಸಂಬಂಧಿಸಿ ಅನೇಕ ಜ್ವಲಂತ ಸಮಸ್ಯೆಗಳಿದ್ದು, ತಹಶೀಲ್ದಾರ್ ಸೌಮ್ಯ ಅವರು ಪರಿಹರಿಸುವ ನಿಟ್ಟಿನಲ್ಲಿ ಗಮನಹರಿಸುತ್ತಿಲ್ಲ. ಅವರನ್ನು ವರ್ಗಾವಣೆ ಮಾಡುವಂತೆ ಆಗ್ರಹಿಸಿದರು.

ಸಾಮಾನ್ಯ ಸಭೆ ಹಿನ್ನಲೆಯಲ್ಲಿ ರೈತರ ಸಭೆ ಮುಂದೂಡಲಾಗಿದೆ ಎಂದು ತಹಶೀಲ್ದಾರ್ ಸೌಮ್ಯ ಹೇಳಿದ್ದರಿಂದ ರೈತರು ಕೆಂಡಾಮಂಡಲರಾದರು. ತಹಶೀಲ್ದಾರ್ ವಿರುದ್ಧ ಘೋಷಣೆ ಕೂಗಿ ಮೆರವಣಿಗೆ ಮೂಲಕ ತಾಲ್ಲೂಕು ಕಚೇರಿಗೆ ತೆರಳಿದರು. ರೈತರೊಂದಿಗೆ ಸಂಧಾನ ನಡೆಸಿದ ತಹಶೀಲ್ದಾರ್ ಸೌಮ್ಯ ಅವರು ಮುಂದಿನ ವಾರ ಸಭೆ ಕರೆಯುವ ಭರವಸೆ ನೀಡಿದರು. ರೈತರಾದ ಹೊಂಬೇಗೌಡ, ಪುರುಷೋತ್ತಮಗೌಡ, ಉಮಾಶಂಕರ್, ಮಂಜಣ್ಣ, ರಮೇಶ್, ಗುಂಡಣ್ಣ, ಮೂರ್ತಿ, ಮೋಹನ್, ಜಯಮ್ಮ, ರುಕ್ಮಿಣಿ ಇತರರಿದ್ದರು.

# ಭಾರತ-ಚೀನಾ ಎಲ್‌ಎಸಿ ಪರಿಸ್ಥಿತಿ ಸ್ಥಿರ

• ಪ್ರಜೋದಯ ವರದಿ

**ನವದೆಹಲಿ:** ಭಾರತ ಮತ್ತು ಚೀನಾ ನಡುವಿನ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ)ಯಲ್ಲಿನ ಪರಿಸ್ಥಿತಿ ಸ್ಥಿರವಾಗಿದೆ. ಆದರೆ ಸೂಕ್ಷ್ಮವಾಗಿದೆ ಎಂದು ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಹೇಳಿದ್ದಾರೆ.

ಜೂ.30ರ ಮಂಗಳವಾರ ಸೇವೆಯಿಂದ ನಿವೃತ್ತರಾಗುತ್ತಿರುವ ದ್ವಿವೇದಿ ಅವರು ಸಂದರ್ಶನವೊಂದರಲ್ಲಿ ಮಾತನಾಡಿ, ಬೆದರಿಕೆಗಳನ್ನು ತಡೆಯಲು ಮತ್ತು ಆಕಸ್ಮಿಕ ಚಟುವಟಿಕೆಗಳಿಗೆ ಪ್ರತಿಕ್ರಿಯಿಸಲು ಭಾರತೀಯ ಸೇನೆಯು ದೃಢವಾದ ನಿಯೋಜನೆ ಹೊಂದಿದೆ ಎಂದು ರಾಷ್ಟ್ರಕ್ಕೆ ಭರವಸೆ ನೀಡಿದರು.

ಉತ್ತರ ಗಡಿಯಲ್ಲಿ ಭಾರತ ಮತ್ತು ಚೀನಾ ನಡುವಿನ ಉದ್ವಿಗ್ನತೆ ಕಡಿಮೆಯಾಗುವ ಲಕ್ಷಣಗಳನ್ನು ತೋರಿಸಿದೆ. ಎರಡೂ ಕಡೆಯವರು ಪರಸ್ಪರರ ಕಾಳಜಿಗಳಿಗೆ ಹೆಚ್ಚಿನ ಸ್ಪಂದಿಸುವಿಕೆ ಮತ್ತು ಸೂಕ್ಷ್ಮತೆ ತೋರಿಸುತ್ತಿದ್ದಾರೆಂದು ತಿಳಿಸಿದರು.

ಕಳೆದ ವರ್ಷದಿಂದ ನವೀಕರಿಸಿದ ರಾಜತಾಂತ್ರಿಕ ಮತ್ತು ಮಿಲಿಟರಿ ತೊಡಗಿಸಿಕೊಳ್ಳುವಿಕೆ, ಉದ್ವಿಗ್ನತೆಯನ್ನು ಕಡಿಮೆ ಮಾಡಲು ಮತ್ತು ನಿಯಮಿತ ಗಡಿ ನಿರ್ವಹಣಾ ಸಮಸ್ಯೆಗಳನ್ನು ಪರಿಹರಿಸಲು ಹಾಗು ಪರಸ್ಪರ ವಿಶ್ವಾಸವನ್ನು ನಿರ್ಮಿಸಲು ಸಹಾಯ ಮಾಡಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಗಡಿ ನಿರ್ಣಯಕ್ಕೆ ಆಯ್ಕೆಗಳನ್ನು ಅನ್ವೇಷಿಸಲು ಸಮಾಲೋಚನೆ ಮತ್ತು ಸಮನ್ವಯಕ್ಕಾಗಿ ಕಾರ್ಯ ಕಾರ್ಯವಿಧಾನ ಅಡಿಯಲ್ಲಿ ತಜ್ಞರ ಗುಂಪನ್ನು



ಸ್ಥಾಪಿಸುವುದು, ಕೈಲಾಸ ಮಾನಸ ಸರೋವರ ಯಾತ್ರೆ ಮತ್ತು ನೇರ ವಿಮಾನಗಳ ಪುನರಾರಂಭ, ಮೂರು ಪಾಸ್ ಮೂಲಕ ಗಡಿ ವ್ಯಾಪಾರದ ಕುರಿತು ಒಮ್ಮತ ಮತ್ತು ವೀಸಾ ಸಡಿಲಿಕೆ ಕ್ರಮಗಳು ಸೇರಿ ಹಲವಾರು ರಾಜತಾಂತ್ರಿಕ ಕ್ರಮಗಳು ಕ್ರಮೇಣ ಸಾಮಾನ್ಯೀಕರಣದ ಸಕಾರಾತ್ಮಕ ಸೂಚಕಗಳಾಗಿ ಕಾರ್ಯನಿರ್ವಹಿಸುತ್ತವೆ ಎಂದು ಅವರು ತಿಳಿಸಿದ್ದಾರೆ.

ಭಾರತ ಮತ್ತು ಚೀನಾ ನಡುವೆ ವಾರ್ಷಿಕ 1,100ಕ್ಕೂ ಹೆಚ್ಚು ಸಂವಹನ ಸಭೆಗಳು ನಡೆಯುತ್ತವೆ. ಇದು ಹಾಟ್‌ಲೈನ್‌ಗಳು, ಧ್ವಜ ಸಭೆಗಳು ಮತ್ತು ಭಾರತ-ಚೀನಾ ಕಮಾಂಡರ್ ಮಟ್ಟದ ಮಾತುಕತೆಗಳು ಮುಂತಾದ ಸ್ಥಾಪಿತ ಕಾರ್ಯವಿಧಾನಗಳ ಮೂಲಕ, ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ. ಆದರೂ

### ಸೇನೆಯ ದೀರ್ಘಕಾಲೀನ ಕಾರ್ಯತಂತ್ರ

ಸೇನೆಯ ದೀರ್ಘಕಾಲೀನ ಕಾರ್ಯತಂತ್ರವು ಸ್ಪಷ್ಟವಾಗಿದೆ. ಶಾಂತಿ ಮತ್ತು ನೆಮ್ಮದಿಯನ್ನು ಕಾಪಾಡಿಕೊಳ್ಳುವುದು, ಸ್ಥಳೀಯ ಸಮಸ್ಯೆಗಳನ್ನು ಸಂವಾದದ ಮೂಲಕ ಪರಿಹರಿಸುವುದು ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳುವುದು, ಅದೇ ಸಮಯದಲ್ಲಿ ನಮ್ಮ ಸನ್ನದ್ಧತೆ, ನಿಲುವು ಮತ್ತು ಮೂಲಸೌಕರ್ಯವು ವಿಶ್ವಾಸಾರ್ಹ ಮತ್ತು ಪರಿಣಾಮಕಾರಿಯಾಗಿ ಉಳಿಯುವುದನ್ನು ಖಚಿತಪಡಿಸಿಕೊಳ್ಳುವುದು ಆದ್ಯತೆ ಎಂದು ನುಡಿದರು.

ಭಾರತೀಯ ಸೇನೆಯು ತೃಪ್ತವಾಗಿಲ್ಲ ಮತ್ತು ಕಾರ್ಯಾಚರಣೆಯ ಸವಾಲುಗಳನ್ನು ಎದುರಿಸಲು ಮೂಲಸೌಕರ್ಯ ಅಭಿವೃದ್ಧಿ ಮತ್ತು ಇತರ ಮಿತ್ರ ಚಟುವಟಿಕೆಗಳಿಗೆ ಆದ್ಯತೆ ನೀಡುತ್ತಿದೆಂದು ಜನರಲ್ ಉಪೇಂದ್ರ ದ್ವಿವೇದಿ ಹೇಳಿದರು.

ಭಾರತ-ಚೀನಾ ಗಡಿ ನಕ್ಷೆ ವಿನಿಮಯ ನಮ್ಮ ಪ್ರಮುಖ ಬೇಡಿಕೆ. ಇದು ಗಡಿಯಲ್ಲಿ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಮತ್ತು ಆ ನಕ್ಷೆಯ ಆಧಾರದ ಮೇಲೆ ಮಾತುಕತೆ ನಡೆಸಲು ನೆರವಾಗುತ್ತದೆ. ಭವಿಷ್ಯದಲ್ಲಿ ಸಂಘರ್ಷಗಳು ಉದ್ಭವವಾಗದಂತೆ ತಡೆಯುವುದು ನಮ್ಮ ಆಶಯ. ಆದರೆ ಸಂಘರ್ಷಗಳಿಗೆ ಸನ್ನದ್ಧತೆ ನಮ್ಮ ಬದ್ಧತೆ ಎಂದು ಸೂಚ್ಯವಾಗಿ ಹೇಳಿದರು.

# ಎಸ್.ಐ.ಆರ್. ಬಗ್ಗೆ ನಾಗರಿಕರಿಗೆ ಪರಿಪೂರ್ಣ ಮಾಹಿತಿ ತಲುಪಿಸಿ

• ಪ್ರಜೋದಯ ವರದಿ

**ಹಾಸನ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ದೇಶದ 18 ರಾಜ್ಯಗಳಲ್ಲಿ ಜೂ.30ರಿಂದ ಜುಲೈ 29ರ ವರೆಗೆ ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ಈ ಹಿನ್ನಲೆಯಲ್ಲಿ ಗೊಂದಾಲಗಳಿಗೆ ಅವಕಾಶವಿಲ್ಲದಂತೆ ನಾಗರಿಕರಿಗೆ ಎಸ್.ಐ.ಆರ್. ಬಗ್ಗೆ ಸೂಕ್ತ ಮಾಹಿತಿ ನೀಡುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಶುಭಂ ಶುಕ್ಲ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಸೋಮವಾರ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಮಟ್ಟದಲ್ಲಿಯೂ ಕೂಡ ಜಾಗೃತಿ ಮೂಡಿಸಲು ಸ್ವಯಂ ಸೇವಕರನ್ನು ನೇಮಕ ಮಾಡಲಾಗಿದ್ದು, ಎಸ್.ಐ.ಆರ್. ಬಗ್ಗೆ ಗೊಂದಲಗಳು ಉಂಟಾದಲ್ಲಿ ಸಹಾಯವಾಣಿ ಸಂಖ್ಯೆ 1950ಗೆ ಕರೆ ಮಾಡಿ ಮಾಹಿತಿ ಪಡೆಯಬಹುದೆಂದು ತಿಳಿಸಿದರು.

ಸಾರ್ವಜನಿಕರಿಗೆ ಸಹಾಯಕವಾಗುವಂತೆ ಚುನಾವಣಾ ಆಯೋಗದ ಇಎಸ್‌ಐ ವೈಬ್ ಸೈಟ್ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿಯೂ




ಸಹ ಎಸ್.ಐ.ಆರ್. ಬಗ್ಗೆ ಮಾಹಿತಿ ತಿಳಿದುಕೊಳ್ಳಬಹುದೆಂದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಮಾತನಾಡಿ, ಮತದಾರ ಪಟ್ಟಿಯಲ್ಲಿ ಅನರ್ಹ ಮತದಾರರನ್ನು ತೆಗೆದು ಹಾಕಿ ಅರ್ಹ ಮತದಾರರ ಹೆಸರನ್ನು ಕಡ್ಡಾಯವಾಗಿ ಮತ ದಾರರ ಪಟ್ಟಿಗೆ ಸೇರಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರು.

ದೇಶದಾದ್ಯಂತ ಜೂ.30 ರಿಂದ ಜುಲೈ.29ರ ವರೆಗೆ ಎಸ್.ಐ.ಆರ್. ನಡೆಯುತ್ತಿದ್ದು, ಜಿಲ್ಲೆಯಲ್ಲಿ 1968 ಬಿ.ಎಲ್.ಓ.ಗಳನ್ನು ನೇಮಕ ಮಾಡಲಾಗಿದೆ. ಪ್ರತಿಯೊಬ್ಬ ಮತದಾರರ ಮನೆಗಳಿಗೆ ಭೇಟಿ ನೀಡಿ ನಿಗದಿತ ನಮೂನೆಯನ್ನು ಒಬ್ಬ ಮತದಾರರಿಗೆ ದ್ವಿಪ್ರತಿ ನಮೂನೆ ಯನ್ನು ನೀಡಲಾಗುತ್ತದೆ. ಭರ್ತಿ ಮಾಡಿದ ನಮೂನೆಯ ಒಂದು ಪ್ರತಿಯನ್ನು ಮತದಾರರಿಗೆ ನೀಡಬೇಕು ಹಾಗೂ ಇನ್ನೊಂದು ನಮೂನೆಯನ್ನು ಬಿ.ಎಲ್.ಒ. ಗಳಿಗೆ ನೀಡಬೇಕು. ಮಾಹಿತಿಯನ್ನು ಪರಿಶೀಲಿಸಿದ ನಿಗದಿತ ನಮೂನೆಯು ಮತದಾರ ಪಟ್ಟಿಗೆ ಸೇರ್ಪಡೆಯಾ ಗುತ್ತದೆ. ಯಾವ ಮತದಾರರ ಹೆಸರು ಕರಡು ಮತದಾರರ ಪಟ್ಟಿಗೆ ಸೇರ್ಪಡೆಯಾಗದೇ ಇರುವ ಮತದಾರರಿಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಒಂದು ತಿಂಗಳು ಕಾಲಾವಕಾಶವನ್ನು ನೀಡಲಾಗುತ್ತದೆಂದು ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾ ಅಧಿಕಾರಿ ಸೌರಭ ಕುಮಾರ್ ಅವರು ಮಾತನಾಡಿ, ಮತದಾನ ಅಧಿಕಾರ ಒಂದು ಸಂವಿಧಾನಿಕ ಅಧಿಕಾರವಾಗಿದ್ದು ಅರ್ಹ ಮತದಾರರನ್ನು ಮತದಾನ ಪಟ್ಟಿಗೆ ಸೇರ್ಪಡೆ ಮಾಡಿ ಅನರ್ಹ ಮತದಾರರನ್ನು ಮತದಾನ ಪಟ್ಟಿಯಿಂದ ಕೈ ಬಿಡುವ ಮೂಲಕ ಉತ್ತಮ ಮತದಾರ ಪಟ್ಟಿಯನ್ನು ರಚನೆ ಮಾಡಬಹುದೆಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಚಂದ್ರಶೇಖರ್, ತಹಶೀಲ್ದಾರ್ ಗೀತಾ, ಮಹಾನಗರ ಪಾಲಿಕೆ ಆಯುಕ್ತರಾದ ಕೃಷ್ಣಮೂರ್ತಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಜುಲೈ 11 ರಂದು ರಾಷ್ಟ್ರೀಯ ಲೋಕ ಅದಾಲತ್

• ಪ್ರಜೋದಯ ವರದಿ

**ಹಾಸನ:** ರಾಜ್ಯಾದ್ಯಂತ ಜುಲೈ 11 ರಂದು ರಾಷ್ಟ್ರೀಯ ಜನತಾ ನ್ಯಾಯಾಲಯ ನಡೆಯಲ್ಲಿದ್ದು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ವಿಧದ ಸಿವಿಲ್ ವ್ಯಾಜ್ಯಗಳು, ಬಗೆಹರಿಸಬಹುದಾದ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಮೋಟಾರು ವಾಹನ ಪ್ರಕರಣಗಳು, ಕೌಟುಂಬಿಕ ಪ್ರಕರಣಗಳು, ಭೂಸ್ವಾಧೀನ ಪ್ರಕರಣಗಳು, ಕಂದಾಯ ಪ್ರಕರಣಗಳು, ಜನನ ಮತ್ತು ಮರಣ ನೋಂದಣಿ ಪ್ರಕರಣಗಳು, ಜೀವನಾಂಶ ಪ್ರಕರಣಗಳು ಹಾಗೂ ಇನ್ನಿತರೆ ಲಘು ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಮತ್ತು ವ್ಯಾಜ್ಯಪೂರ್ವ ಬ್ಯಾಂಕ್ ಸಾಲ ಮರು ಪಾವತಿಯ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶವಿದ್ದು, ಸಂಬಂಧಪಟ್ಟ ಕಕ್ಷಿಗಾರರು ವಕೀಲರ ಅಥವಾ ಖುದ್ದಾಗಿ ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಕೊಳ್ಳಬಹುದಾಗಿದ್ದು, ಇದರ ಸದುಪಯೋಗ ಪಡೆಯುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ.ಕೆ.ದಾಕ್ಷಾಯಿಣಿ ತಿಳಿಸಿದ್ದಾರೆ.

## ರಂಗಭೂಮಿ ಕ್ಷೇತ್ರದಲ್ಲಿ ಅವಕಾಶಗಳು ಹೆಚ್ಚು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರಂಗಭೂಮಿಯಲ್ಲಿ ಅಭಿನಯ ಮಾಡಲು ಇಚ್ಛಿಸುವವರಿಗೆ ಅವಕಾಶ ಗಳು ಹೆಚ್ಚಿವೆ. ಅದರ ಸದುಪಯೋಗವನ್ನು ಆಸಕ್ತರು ಪಡೆಯಬೇಕೆಂದು ರಂಗಭೂಮಿ ಕಲಾವಿದೆ ಪೂಜಾ ರಘುನಂದನ್ ಅವರು ಹೇಳಿದರು.



ಪಟ್ಟಣದವಿವೇಕಾನಂದ ಇಂಟರ್ ನ್ಯಾಷನಲ್ ಶಾಲೆಯಲ್ಲಿ ರೋಟರಿ ಸಂಸ್ಥೆ ವತಿಯಿಂದ ಆಯೋ ಜಿಸಿದ್ದ ರಂಗಭೂಮಿ ಬಗ್ಗೆ ಮಕ್ಕಳಿಗೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ಹಾಸನ ಜಿಲ್ಲೆ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದೆ. ಪೌರಾಣಿಕ ನಾಟಕ, ಐತಿಹಾಸಿಕ ನಾಟಕಗಳ ಮೂಲಕ ರಾಮಾಯಣ-ಮಹಾಭಾರತದಂತ ಮಹಾನ್ ಗ್ರಂಥಗಳ ಸಂಸ್ಕಾರ ಸಂಸ್ಕೃತಿಯ ಪರಿಚಯ ಮಾಡಿಕೊಟ್ಟಿದೆ. ಮಕ್ಕಳಲ್ಲಿ ಕಲೆ ಸಾಹಿತ್ಯ ಸಂಸ್ಕೃತಿಯ ಮೂಲಕ ಸಂಸ್ಕಾರವನ್ನು ಬೆಳೆಸಬೇಕು. ಆ ಮೂಲಕ ಸಂಸ್ಕಾರಯುತ ಬಾಲ ನಟರನ್ನು ತಯಾರು ಮಾಡಬೇಕು. ಪರಿಸರ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರೂಪಕಗಳು, ಪಲ್ಸ್ ಪೋಲಿಯೋ ಅಭಿಯಾನ, ಜಿಲ್ಲೆಯ ಇತಿಹಾಸ ಸ್ಮರಿಸುವ ನಾಟಕಗಳನ್ನು ಸಿದ್ಧಪಡಿಸಿ ಮಕ್ಕಳ ಮೂಲಕ ಅಭಿನಯಕ್ಕೆ ಅವಕಾಶ ಮಾಡಿಕೊಡಬೇಕೆಂದು ಸಲಹೆ ನೀಡಿದರು.

ಚಲನಚಿತ್ರಗಳಲ್ಲಿ ರಿಟೇಕ್‌ಗೆ ಅವಕಾಶವಿದೆ. ಆದರೆ ನಾಟಕ ಹಾಗು ರಂಗಭೂಮಿಯಲ್ಲಿ ಆ ಅವಕಾಶವಿಲ್ಲ. ರಂಗಭೂಮಿ ಕಲಾವಿದರಾಗಿ ರೂಪುಗೊಳ್ಳಲು ವಿಪುಲ ಅವಕಾಶಗಳಿವೆ. ಮೈಸೂರಿನ ರಂಗಾಯಣ, ಶಿವಮೊಗ್ಗಾ ಹೆಗ್ಗೋಡು, ಮೈಸೂರಿನ ಮಂಡ್ಯ ರಮೇಶ್ ಅವರ ನಟನ ಶಾಲೆಗಳಿವೆ. ಶಿಕ್ಷಣದ ಸಂಗಡ ಬಾಲ್ಯದಲ್ಲಿ ಮಕ್ಕಳು ಸಾಹಿತ್ಯ ಸಂಸ್ಕೃತಿ, ಸಂಸ್ಕಾರವನ್ನು ಅರಿಯಬೇಕು. ಸಂಗೀತ, ಜನಪದ, ರಂಗಭೂಮಿ, ಭರತನಾಟ್ಯ, ಗಮಕ ಇನ್ನಿತರ ಕಲೆಗಳನ್ನು ಮೈಗೂಡಿಸಿಕೊಳ್ಳಬೇಕು. ರಂಗಭೂಮಿ ಹಾಗು ಚಲನಚಿತ್ರಕ್ಕೆ ಇರುವ ವ್ಯತ್ಯಾಸ, ಅಭಿನಯ ಕಲೆ, ಸಣ್ಣ ಸಣ್ಣ ರೂಪಕಗಳ ಬಗ್ಗೆ ಉಪನ್ಯಾಸ ನೀಡಿದರು.

ರೋಟರಿ ಸಂಸ್ಥೆಯ ಅಧ್ಯಕ್ಷ ಜ್ಯೋತಿ ಶ್ರೀನಿವಾಸ್, ಪ್ರಾಂಶುಪಾಲ ಮಹಾದೇವ್ ಇದ್ದರು.

### ಪ್ರತಿದಿನ 22 ಟನ್ ತ್ಯಾಜ್ಯ ಸಂಗ್ರಹ: ಪೌರಾಯುಕ್ತ ಹೆಚ್.ಟಿ.ಕೃಷ್ಣಮೂರ್ತಿ

# ಕಸ ವಿಂಗಡಿಸದಿರುವುದೇ ನಗರಸಭೆಗೆ ದೊಡ್ಡ ಸವಾಲು

• ಪ್ರಜೋದಯ ವರದಿ

**ಅರಸೀಕೆರೆ:** ಸ್ವಚ್ಛ ಭಾರತ್ ಯೋಜನೆಯನ್ನು ನಗರಸಭೆ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುತ್ತಿದೆ. ಆದರೆ, ಸಾರ್ವಜನಿಕರು ಮನೆ ಬಳಿಗೆ ಬರುವ ಕಸ ಸಂಗ್ರಹ ವಾಹನಗಳಿಗೆ ಕಸವನ್ನು ವಿಂಗಡಿಸದೆ ನೀಡುತ್ತಿರುವುದು ನಗರಸಭೆಗೆ ದೊಡ್ಡ ಸವಾಲಾಗಿದೆ ಎಂದು ನಗರಸಭೆ ಪೌರಾಯುಕ್ತ ಹೆಚ್.ಟಿ.ಕೃಷ್ಣಮೂರ್ತಿ ಅವರು ಹೇಳಿದರು.

ನಗರದಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛ ಸರ್ವೇಕ್ಷಣ, ಘನತ್ಯಾಜ್ಯ ನಿರ್ವಹಣಾ ನಿಯಮಗಳು, ಸಾಮಾಜಿಕ ಮಾಧ್ಯಮ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕರ ಸಹಕಾರವಿಲ್ಲದೆ ಸ್ವಚ್ಛ ನಗರದ ಕನಸನ್ನು ನನಸಾಗಿಸಲು ಸಾಧ್ಯವಿಲ್ಲ. ನಗರಸಭೆ ವತಿಯಿಂದ ಸ್ವಚ್ಛನಗರ ಅಭಿಯಾನದಡಿ ನಿರಂತರ ಜಾಗೃತಿ ಮೂಡಿಸಲಾಗುತ್ತಿದ್ದರೂ, ನಗರದ 31 ವಾರ್ಡ್‌ಗಳಿಂದ ಪ್ರತಿದಿನ ಸುಮಾರು 22 ಟನ್ ತ್ಯಾಜ್ಯ ಸಂಗ್ರಹವಾಗುತ್ತಿರುವುದು ಆತಂಕಕಾರಿ



ಬೆಳವಣಿಗೆಯಾಗಿದೆ ಎಂದು ತಿಳಿಸಿದರು.

ಅಡುಗೆ ಮನೆಯ ತ್ಯಾಜ್ಯ, ಉದ್ಯಾನವನ ತ್ಯಾಜ್ಯ, ಮರುಬಳಕೆ ಮಾಡಬಹುದಾದ ಒಣ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ ಹಾಗು ಆರೋಗ್ಯ ಮತ್ತು ಪರಿಸರಕ್ಕೆ ಅಪಾಯಕಾರಿಯಾದ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡಿದರೆ ಮಾತ್ರ ಅವುಗಳನ್ನು ಸಂಸ್ಕರಣಾ ಘಟಕದಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಹಾಗೂ ಮರುಬಳಕೆಗೆ ಒಳಪಡಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ತರಕಾರಿ ಮತ್ತು ಹಣ್ಣುಗಳ ಸಿಪ್ಪೆ, ಉಳಿದ ಆಹಾರ, ಟೀ-ಕಾಫಿ ಪುಡಿ, ಪ್ಲಾಸ್ಟಿಕ್ ವಸ್ತುಗಳು, ಕಾಗದ, ರಟ್ಟಿನ ಪೆಟ್ಟಿಗೆಗಳು, ಲೋಹದ ವಸ್ತುಗಳು, ಗಾಜಿನ ಬಾಟಲಿಗಳು, ಬಟ್ಟೆ, ರಬ್ಬರ್, ಬಳಸಿದ ಡೈಪರ್‌ಗಳು, ಸ್ಯಾನಿಟರಿ ನ್ಯಾಪ್ಕಿನ್‌ಗಳು, ಬಣ್ಣದ ಡಬ್ಬಗಳು, ಕೀಟನಾಶಕ ಬಾಟಲಿ ಗಳು, ಸಿಎಫ್‌ಎಲ್ ಬಲ್ಬ್‌ಗಳು, ವೈದ್ಯಕೀಯ ತ್ಯಾಜ್ಯ ಹಾಗೂ ಹಳೆಯ ಬ್ಯಾಟರಿಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಸಾರ್ವಜನಿಕರು ಪೌರ ಕಾರ್ಮಿಕರಿಗೆ ಕಸವನ್ನು ವಿಂಗಡಿಸಿ ನೀಡುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು ದಂಡ ವಿಧಿಸಲಾಗುವುದೆಂದು ಎಚ್ಚರಿಸಿದರು.

ಪರಿಸರ ಇಂಜಿನೀಯರ್ ರವಿ ಕುಮಾರ್ ಅವರು ಮಾತನಾಡಿ, ನಗರದಲ್ಲಿ ಸಂಜೆ ವೇಳೆ ಯಲ್ಲಿಯೂ ಕಸ ಸಂಗ್ರಹ ವಾಹನಗಳು ಸಂಚರಿಸುತ್ತಿವೆ. ವಾಣಿಜ್ಯ ಸಂಸ್ಥೆಗಳು ಹಾಗು ರಸ್ತೆ ಬದಿ ವ್ಯಾಪಾರಿಗಳು ತಮ್ಮ ತ್ಯಾಜ್ಯವನ್ನು ಕಡ್ಡಾಯವಾಗಿ ಈ ವಾಹನಗಳಿಗೆ ನೀಡಬೇಕು. ನಿಯಮ ಉಲ್ಲಂಘಿಸಿದರೆ ವ್ಯಾಪಾರ ಪರವಾನಗಿ ರದ್ದುಪಡಿಸುವುದು ಸೇರಿ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಪರಿಸರ ಸ್ನೇಹಿ ಬ್ಯಾಗ್ ಬಳಕೆಯ ಕುರಿತು ಮಾಹಿತಿ ನೀಡಲಾಯಿತು. ಮೈಸೂರಿನ ಅರಿವು ಸಾಂಸ್ಕೃತಿಕ ಸಂಘದ ಕಲಾವಿದರು ಗೀತಗಾಯನ ಹಾಗು ಬೀದಿ ನಾಟಕದ ಮೂಲಕ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಿದರು. ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಸಾಸುರ ವೇಷಧಾರಿ ಶಶಿಕುಮಾರ್ ವಿಶೇಷ ಆಕರ್ಷಣೆಯಾಗಿದ್ದರು.

ಕಂದಾಯ ನಿರೀಕ್ಷಕ ಮಂಜುನಾಥ್, ಹಿರಿಯ ಆರೋಗ್ಯ ನಿರೀಕ್ಷಕರಾದ ಲಿಂಗರಾಜು, ರೇವಣ್ಣಸಿದ್ದಪ್ಪ, ವ್ಯವಸ್ಥಾಪಕಿ ಕಲಾವತಿ, ಪೌರ ನೌಕರರು ಇತರರು ಉಪಸ್ಥಿತರಿದ್ದರು.

## ಹಾಲು ಒಕ್ಕೂಟದಿಂದ ರೈತರ ಆರ್ಥಿಕ ಪ್ರಗತಿ



• ಪ್ರಜೋದಯ ವರದಿ

**ಕೊಣನೂರು:** ಹಾಸನ ಜಿಲ್ಲಾ ಹಾಲು ಒಕ್ಕೂಟವು ಎಲ್ಲರ ಸಹಕಾರದಿಂದ ಉತ್ತಮ ಲಾಭ ಗಳಿಸುತ್ತಿದ್ದು, ರೈತರಿಗೆ ಹೆಚ್ಚಿನ ಹಣ ನೀಡುತ್ತಿದೆ. ರೈತ ಮಹಿಳೆಯರ ಆರ್ಥಿಕ ಪ್ರಗತಿಗೆ ಹಾಸನ ಹಾಲು ಒಕ್ಕೂಟ ಹೆಚ್ಚು ಶ್ರಮಿಸುತ್ತಿದೆ ಎಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ಹೊನ್ನವಳ್ಳಿ ಸತೀಶ್ ಅವರು ತಿಳಿಸಿದರು.

ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 50 ಲಕ್ಷ ಬೆಳೆ ಸಾಲ ಹಾಗೂ ಮಹಿಳಾ ಸ್ವ-ಸಹಾಯ ಸಂಘಕ್ಕೆ 16 ಲಕ್ಷ ಸಾಲ ವಿತರಣೆ ಮಾಡಿ ಮಾತನಾಡಿದ ಅವರು, ಹಸು ಹಾಲಿನ ಉತ್ಪಾದನೆಯಲ್ಲಿ ನಮ್ಮ ರಾಜ್ಯ ಮೊದಲ ಸ್ಥಾನದಲ್ಲಿದೆ. ಹೈನುಗಾರಿಕೆಯಿಂದ ಅಧಿಕ ಲಾಭವಿದ್ದು, ಎಲ್ಲರೂ ಕೃಷಿಯೊಂದಿಗೆ ಹೈನುಗಾರಿಕೆ ಅಳವಡಿಸಿಕೊಳ್ಳಿ. ಹೈನುಗಾರಿಕೆಯಿಂದ ಭೂಮಿಗೆ ಸಾವಯವ ಗೊಬ್ಬರ ದೊರಕಲಿದ್ದು, ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ ಎಂದರು.

ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಕೆ.ಕೃಷ್ಣ ಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮಾಡುವ ರೈತರಿಗೆ ಸಂಘದಿಂದ ಹೆಚ್ಚಿನ ಸಾಲ ನೀಡಲಾಗುತ್ತಿದ್ದು, ಅದರ ಸದುಪಯೋಗ ಪಡೆದು ಕೊಂಡು ಸಾವಯವ ಉತ್ಪಾದನೆಗೆ ಹೆಚ್ಚಿನ ಪ್ರೋತ್ಸಾಹ ಪಡೆದು ಕೊಳ್ಳಲು ಸಲಹೆ ನೀಡಿದರು.

ಉಪಾಧ್ಯಕ್ಷರಾದಬಿ.ಜೆ.ಮಂಜುಳಾ, ಮುಖ್ಯ ಕಾರ್ಯನಿರ್ವ ಹಣಾಧಿಕಾರಿ ಕೆ.ಎ.ರಾಮು, ನಿರ್ದೇಶಕರಾದ ಎಸ್.ನಾಗರಾಜು, ಕೆ.ಆರ್.ಶಿವಣ್ಣ, ನಂಜುಂಡೇಗೌಡ, ಕೆ.ಎಸ್.ನಿತಿನ್, ಸಂದೀಪ್, ಕೆ.ಆರ್.ಸುನಿಲ್‌ಕುಮಾರ್, ಕೆ.ಎನ್.ಪ್ರವೀಣ್, ಬಸವರಾಜನಾಯಕ, ವನಜಾಕ್ಷಿ, ಸುಹೇಲ್ ಪಾಷಾ, ಮೇಲ್ವಿಚಾರಕ ಎಂ.ಎಸ್.ಬಸವರಾಜ್, ರೈತರು, ಮಹಿಳಾ ಸಂಘದ ಪದಾಧಿಕಾರಿಗಳು, ಸದಸ್ಯರು ಇದ್ದರು.

# ಬೇಲೂರಿನಲ್ಲಿ ಅದ್ದೂರಿ ಕೆಂಪೇಗೌಡರ ಜಯಂತಿ

• ಪ್ರಜೋದಯ ವರದಿ

**ಬೇಲೂರು:** ಕೆಂಪೇಗೌಡರ ಆದರ್ಶಗಳು ಯುವ ಪೀಳಿಗೆಗೆ ಮಾರ್ಗದರ್ಶಿಯಾಗಲಿ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಯಗಚಿ ಸೇತುವೆ ಬಳಿಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ವೃತ್ತದಲ್ಲಿರುವ ಪೂಜ್ಯರ ಭಾವಚಿತ್ರ ಹಾಗೂ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಜಗದ್ಗುರುಗಳಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಆಶೀರ್ವಾದ ನಮ್ಮ ನಿಮ್ಮೆಲ್ಲರ ಮೇಲಿರಲಿ. ನಾಡಪ್ರಭು ಕೆಂಪೇಗೌಡರು ಕೇವಲ ಬೆಂಗಳೂರು ನಗರ ನಿರ್ಮಿಸಿದವರಲ್ಲ, ಬದಲಾಗಿ ದೂರದೃಷ್ಟಿಯ ಆಡಳಿತಗಾರರಾಗಿದ್ದರು. ನೂರಾರು ವರ್ಷಗಳ ಹಿಂದೆಯೇ ಭವಿಷ್ಯದ ಅಗತ್ಯಗಳನ್ನು ಅರಿತು ನಗರ ನಿರ್ಮಾಣ, ಕೆರೆ-ಕಟ್ಟೆಗಳ ಅಭಿವೃದ್ಧಿ ಹಾಗೂ ವ್ಯಾಪಾರ ವೃದ್ಧಿಗೆ ಅವರು



ನೀಡಿದ ಕೊಡುಗೆ ಅಪಾರ. ಅವರ ಆದರ್ಶಗಳು ಇಂದಿನ ಯುವ ಪೀಳಿಗೆಗೆ ಪ್ರೇರಣೆಯಾಗಬೇಕೆಂದರು.

ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ, ವಿಶ್ವಾಸ ಮತ್ತು ಜನಸೇವೆಯೇ ತಮ್ಮ ಪ್ರಮುಖ ಧ್ಯೇಯವಾಗಿದೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ರಾಜಕೀಯ ಷಡ್ಯಂತ್ರಗಳು ಹಾಗೂ ಅಡ್ಡ ಮತದಾನದಂತಹ ಘಟನೆಗಳು ನಡೆದಿದ್ದರೂ, ಭಗವಂತನ ಆಶೀರ್ವಾದದಿಂದ ನಾನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಮೃದ್ಧನಾಗಿದ್ದೇನೆ. ಅಧಿಕಾರದ ಆಸೆಯಿಂದ ರಾಜಕೀಯದಲ್ಲಿ ಉಳಿದಿಲ್ಲ. ಜನರ ವಿಶ್ವಾಸ ಮತ್ತು ಸೇವೆಯೇ ನನಗೆ ಮುಖ್ಯ ಎಂದರು.

ಆಂಜನೇಯ ಸ್ವಾಮಿಯ ಆರಾಧಕನಾಗಿ ಬೇಲೂರು ಜನರ ಸೇವೆಗೆ ಬಂದಿದ್ದೇನೆ. ಭ್ರಷ್ಟಾಚಾರ ಮಾಡಿ ಮನೆ ತುಂಬಿಸಿಕೊಳ್ಳಲು ಅಥವಾ ಸಮಾಜದಲ್ಲಿ ವೈಷಮ್ಯ ಸೃಷ್ಟಿಸಲು ಬಂದಿಲ್ಲ. ತಾಲ್ಲೂಕಿನ ಅಭಿವೃದ್ಧಿಯೇ ನನ್ನ ಗುರಿ. ಕೆಂಪೇಗೌಡರು ಒಂದು ಸಮುದಾಯಕ್ಕೆ ಮಾತ್ರ ಸೀಮಿತರಾದವರಲ್ಲ, ಇಡೀ ಕರ್ನಾಟಕದ ಹೆಮ್ಮೆಯ ವ್ಯಕ್ತಿ ಎಂದು ಹೇಳಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘುಗೌಡ ಅವರು ಮಾತನಾಡಿ, ಬೇಲೂರು ತಾಲ್ಲೂಕಿನಲ್ಲಿ ಕೆಂಪೇಗೌಡ ಜಯಂತಿಯನ್ನು ಶಿಸ್ತು, ಸೌಹಾರ್ದತೆ ಹಾಗೂ ಒಗ್ಗಟ್ಟಿನಿಂದ ಆಚರಿಸಿರುವುದು ಹೆಮ್ಮೆಯ ವಿಷಯ. ಕೆಂಪೇಗೌಡರನ್ನು ನಾವು ಕಣ್ಣಾರೆ ನೋಡಿಲ್ಲವಾದರೂ, ಅವರ ಆದರ್ಶಗಳನ್ನು ಪರಮಪೂಜ್ಯ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಸಮಾಜ ಸಂಘಟನೆ ಹಾಗೂ ಸೇವಾ ಕಾರ್ಯಗಳಲ್ಲಿ ಕಾಣಬಹುದಾಗಿದೆ. ಪ್ರಸ್ತುತ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಸಮಾಜವು ಅಭಿವೃದ್ಧಿ ಯತ್ತ ಸಾಗುತ್ತಿದೆ ಎಂದರು.

ಸಮಾಜದ ಮುಖಂಡರು, ಮಹಿಳೆಯರು, ಯುವಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## ಐರ್ಲೆಂಡ್ ವಿರುದ್ಧ ವಿಶ್ವ ಚಾಂಪಿಯನ್ನರಿಗೆ ಮುಖಭಂಗ: ಕೋಚ್ ಗಂಭೀರ್ ವೈಫಲ್ಯ

• ಪ್ರಜೋದಯ ವರದಿ

**ಬೆಂಗಳೂರು:** ಐಸಿಸಿ ಟಿ-20 ವಿಶ್ವಕಪ್ ಟೂರ್ನಿಯಲ್ಲಿ ಸತತ ಎರಡು ಬಾರಿಗೆ ಚಾಂಪಿಯನ್ ಆಗಿರುವ ಭಾರತ ತಂಡವು ಕ್ರಿಕೆಟ್ ಕೂಸು ಐರ್ಲೆಂಡ್ ವಿರುದ್ಧ ಸರಣಿ ಸೋಲಿನ ಮುಖಭಂಗಕ್ಕೊಳಗಾಗಿದೆ. ಅದರಿಂದಾಗಿ ಕೋಚ್ ಗೌತಮ್ ಗಂಭೀರ್ ಕಾರ್ಯವೈಖರಿಯ ಬಗ್ಗೆ ಪ್ರಶ್ನೆಗಳು ಎದ್ದಿವೆ.

ರಾಹುಲ್ ದ್ರಾವಿಡ್ ಅವರ ಯಶಸ್ವಿ ಅವಧಿಯ ನಂತರ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ಗೌತಮ್ ಗಂಭೀರ್, 2024ರ ಜುಲೈನಲ್ಲಿ ಜವಾಬ್ದಾರಿ ವಹಿಸಿಕೊಂಡಿದ್ದರು. ನೇರ, ದಿಟ್ಟ ನುಡಿಯ ಗಂಭೀರ್ ಕೋಚ್ ಆದಾಗ ಅಭಿಮಾನಿಗಳಲ್ಲಿ ಅಪಾರ ನಿರೀಕ್ಷೆಗಳಿದ್ದವು.

ಗಂಭೀರ್ ಮಾರ್ಗದರ್ಶನದಲ್ಲಿ ಭಾರತ ತಂಡವು 2025ರ ಏಷ್ಯಾ ಕಪ್, 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಹಾಗೂ 2026ರ ಟಿ-20 ವಿಶ್ವಕಪ್ ಗೆದ್ದು ಐತಿಹಾಸಿಕ ಸಾಧನೆ ಮಾಡಿರುವುದು ನಿಜ. ಇದೇ ಅವಧಿಯಲ್ಲಿ ಟೀಮ್ ಇಂಡಿಯಾ ತೀರಾ ಕಳಪೆ ಮಟ್ಟದ ಪ್ರದರ್ಶನ ನೀಡಿರುವುದು ಮತ್ತು ಆಘಾತಕಾರಿ ಸರಣಿ ಸೋಲುಗಳನ್ನು ಎದುರಿಸಿರು ವುದು ಗಂಭೀರ್ ಅವರ ಕೋಚಿಂಗ್ ಶೈಲಿ ಹಾಗೂ ತಂತ್ರಗಾರಿಕೆ ಮೇಲೆ ಹಲವು ಪ್ರಶ್ನೆಗಳನ್ನು ಎತ್ತುವಂತೆ ಮಾಡಿದೆ.


### ಹಾಸನದ 1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಸಿ.ಮಿಸ್: 882/2026

ಅರ್ಜಿದಾರರು : ಈಶ್ವರ ಜೆ.ಬಿ. ಬಿನ್ ಲೇಟ್ ಬಸವರಾಜು ಎನ್.
ಸುಮಾರು 45 ವರ್ಷ, ಕಡದವರಳ್ಳಿ ಗ್ರಾಮ,
ಸೀಗೆ ಅಂಚೆ, ಸಾಲಗಾಮೆ ಹೋಬಳಿ,
ಹಾಸನ ತಾಲ್ಲೂಕು, ಹಾಸನ ಜಿಲ್ಲೆ.
ಹಾಲಿ ವಾಸ:- ನಂ.110, 3ನೇ ಮಹಡಿ,
ತುಪ್ಪಯ್ಯ ಮದುವೆ ಹಾಲ್ ಹತ್ತಿರ,
ಸರ್ಕಾರಿ ಶಾಲೆ ಹತ್ತಿ, ಸಿದ್ದೇನಹೊಸಹಳ್ಳಿ
ಮಂಚೇನಹಳ್ಳಿ, ಬೆಂಗಳೂರು-562123.

ವಿರುದ್ಧ

ರೆಸ್ಪಾಂಡೆಂಟರು : ತಹಶೀಲ್ದಾರ್‌ರವರು ಜನನ ಮತ್ತು ಮರಣ
ನೊಂದಣಾಧಿಕಾರಿಗಳು ಹಾಸನ ತಾಲ್ಲೂಕು, ಹಾಸನ.

ಪ್ರಕಟಣೆ

ಅರ್ಜಿದಾರರು ಹಾಸನ ತಾಲ್ಲೂಕು, ಸಾಲಗಾಮೆ ಹೋಬಳಿ, ಕಡದರವಳ್ಳಿ ಗ್ರಾಮದಲ್ಲಿ ವಾಸವಾಗಿರುವ ಈಶ್ವರ ಜೆ.ಬಿ. ರವರ ತಾಯಿಯಾದ ಪಾಪಕ್ಕ @ ಈರಮ್ಮ ಕೋಂ ಲೇಟ್ ಬಸವರಾಜು ಎನ್. ರವರು ದಿನಾಂಕ 27-05-1987 ರಂದು ಮರಣ ಹೊಂದಿರುತ್ತಾರೆಂದು ಅರ್ಜಿದಾರರ ತಂದೆಯ ಮರಣ ಪ್ರಮಾಣ ಪತ್ರವು ಸಂಬಂಧಪಟ್ಟ ಕಚೇರಿಯಲ್ಲಿ ನೊಂದಣಿಯಾಗಿಲ್ಲವೆಂದು ಅರ್ಜಿದಾರರ ತಾಯಿಯಾದ ಪಾಪಕ್ಕ @ ಈರಮ್ಮ ಕೋಂ ಲೇಟ್ ಬಸವರಾಜು ಎನ್. ರವರ ಮರಣ ಪ್ರಮಾಣ ಪತ್ರವು ಅತ್ಯವಶ್ಯಕವಾಗಿ ಬೇಕಾಗಿರುತ್ತದೆಂದು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ತಂದಿರುತ್ತಾರೆ. ಪಾಪಕ್ಕ @ಈರಮ್ಮ ಕೋಂ ಲೇಟ್ ಬಸವರಾಜು ಎನ್. ರವರು ಕಡದವರಳ್ಳಿ ಗ್ರಾಮದವರಾಗಿದ್ದು, ಸದರಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆಂದು ಅರ್ಜಿಯಲ್ಲಿ ತಿಳಿಸಿರುತ್ತಾರೆ. ಅರ್ಜಿದಾರರ ತಾಯಿಯಾದ ಪಾಪಕ್ಕ @ ಈರಮ್ಮ ಕೋಂ ಲೇಟ್ ಬಸವರಾಜು ಎನ್. ರವರ ವಾರಸುದಾರರು ಯಾರಾದರೂ ಇದ್ದಲ್ಲಿ ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ದಿನಾಂಕ: 04-07-2026ರಂದು ಪೂರ್ವಾಹ್ನ 11 ಗಂಟೆಗೆ ನೀವುಗಳು ಖುದ್ದಾಗಿ ಅಥವಾ ಸರಿಯಾಗಿ ಮಾಹಿತಿ ಪಡೆದಿರುವ ವಕೀಲರ ಮೂಲಕ ನ್ಯಾಯಾಲಯದಲ್ಲಿ ಹಾಜರಾಗಬೇಕೆಂದು ಇದಕ್ಕೆ ತಪ್ಪಿದ್ದರೆ ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದೆಂದು ಮತ್ತು ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

2026ನೇ ವರ್ಷದ ಜೂನ್ ತಿಂಗಳ 27ನೇ ದಿವಸದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ

ಅರ್ಜಿದಾರರ ಪರ ವಕೀಲರು
ಸ್ಥಳ : ಹಾಸನ
ದಿನಾಂಕ: 27-06-2026

ಶಿರಸ್ತೇದಾರರು
ಹಾಸನದ 1ನೇ ಅಧಿಕ ಸಿವಿಲ್
ಜಡ್ಜ್ (ಕಿ.ವಿ) ನ್ಯಾಯಾಲಯದಲ್ಲಿ


# ಬೇಲೂರು ಕ್ರೀಡಾಂಗಣ ಅಭಿವೃದ್ಧಿಗೆ ಕ್ರಮ

• ಪ್ರಜೋದಯ ವರದಿ

**ಬೇಲೂರು:** ಕ್ರೀಡಾಂಗಣದ ಅಭಿವೃದ್ಧಿಗೆ ಸರ್ಕಾರದಿಂದ ವಿಶೇಷ ಅನುದಾನ ತರಿಸಿ, ಆಧುನಿಕ ಸೌಲಭ್ಯ ಕಲ್ಪಿಸುವ ಮೂಲಕ ಯುವಕರು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಪಟ್ಟಣದ ಗೆಂಡೆಹಳ್ಳಿ ರಸ್ತೆಯಲ್ಲಿರುವ ಸರ್ಕಾರಿ ಕ್ರೀಡಾಂಗಣದ ದುರಸ್ತಿ ಬಗ್ಗೆ ಸಾರ್ವಜನಿಕರ ದೂರಿನ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಕ್ರೀಡಾಂಗಣದಲ್ಲಿನ ಮೂಲಸೌಕರ್ಯಗಳ ಕೊರತೆ, ನಿರ್ವಹಣೆಯ ಅಭಾವ ಹಾಗೂ ಕ್ರೀಡಾಪಟುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅಧಿಕಾರಿಗಳ ಸಮ್ಮುಖದಲ್ಲಿ ಆಲಿಸಿ, ಶೀಘ್ರದಲ್ಲೇ ಅಗತ್ಯ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುವುದಾಗಿ ಭರವಸೆ ನೀಡಿದರು.

ಪರಿಶೀಲನೆ ವೇಳೆ ಕ್ರೀಡಾಂಗಣದ ಓಟದ ಟ್ರ್ಯಾಕ್, ಆಟದ ಮೈದಾನದ ಸ್ಥಿತಿ, ಪ್ರೇಕ್ಷಕರ ಆಸನ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ಸೇರಿ ವಿವಿಧ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಗಮನಿಸಿ ಕ್ರೀಡಾಂಗಣ



ವನ್ನು ಉತ್ತಮ ಗುಣಮಟ್ಟದ ಕ್ರೀಡಾ ಕೇಂದ್ರವನ್ನಾಗಿ ರೂಪಿಸುವ ಉದ್ದೇಶದಿಂದ ಸಮಗ್ರ ಅಭಿವೃದ್ಧಿ ಯೋಜನೆ ರೂಪಿಸಿ ಸರ್ಕಾರದ ಅನುದಾನವನ್ನು ಪಡೆದು ಹಂತ ಹಂತವಾಗಿ ಕಾಮಗಾರಿ ಕೈಗೊಳ್ಳಲಾಗುವುದೆಂದರು.

ಸ್ಥಳೀಯ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ಕ್ರೀಡಾಂಗಣ ಹಲವು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬಗ್ಗೆ ಶಾಸಕರ ಗಮನ ಸೆಳೆದರು. ಮಳೆಗಾಲದಲ್ಲಿ ಮೈದಾನ ಕೆಸರಿನಿಂದ ತುಂಬಿ ಅಭ್ಯಾಸ ನಡೆಸಲು ತೊಂದರೆಯಾಗುತ್ತಿದೆ. ಓಟದ ಟ್ರ್ಯಾಕ್ ಹಾಳಾಗಿದ್ದು, ಸಮರ್ಪಕ ಬೆಳಕಿನ ವ್ಯವಸ್ಥೆ ಇಲ್ಲದಿರುವುದು ಹಾಗೂ ನಿರ್ವಹಣೆಯ ಕೊರತೆಯಿಂದ ಕ್ರೀಡಾಪಟುಗಳು ಸಮಸ್ಯೆ ಎದುರಿಸುತ್ತಿದ್ದಾರೆಂದು ಮನವಿ ಮಾಡಿದರು.

ಮನವಿಯನ್ನು ಆಲಿಸಿದ ಶಾಸಕರು ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕಾಮಗಾರಿ ಅಂದಾಜುಪಟ್ಟಿ ಸಿದ್ಧಪಡಿಸುವಂತೆ ಸೂಚಿಸಿದ್ದಾರೆ. ಕ್ರೀಡಾಂಗಣದ ಅಭಿವೃದ್ಧಿಗೆ ಬೇಕಾದ ಎಲ್ಲಾ ಕ್ರಮಗಳನ್ನು ಆದ್ಯತೆಯ ಮೇರೆಗೆ ಕೈಗೊಂಡು ಕ್ರೀಡಾಪಟುಗಳಿಗೆ ಉತ್ತಮ ವಾತಾವರಣ ಕಲ್ಪಿಸಲಾಗುವುದೆಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ಕ್ರೀಡಾಪಟುಗಳು ಇತರರು ಉಪಸ್ಥಿತರಿದ್ದರು.

# ವಿಜಯೇಂದ್ರನನ್ನು ಕಿತ್ತು ಹಾಕಬೇಕು: ಆಡಿಯೋ ವೈರಲ್

• ಪ್ರಜೋದಯ ವರದಿ

**ಬೆಂಗಳೂರು:** ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಬೇಕು ಎಂಬುದಾಗಿ ಪ್ರದೀಪ್ ಎಂಬುವವರ ಜೊತೆ ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅವರು ಮಾತನಾಡಿದ್ದಾರೆನ್ನಲಾದ ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಆದರೆ ಅದಕ್ಕೂ ನನಗೂ ಸಂಬಂಧವಿಲ್ಲ. ಆಡಿಯೋ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಆಡಿಯೋ ಯಾರದ್ದು ಎನ್ನುವುದನ್ನು ಮಾಧ್ಯಮಗಳೇ ಕಂಡುಹಿಡಿಯಲಿ ಎಂದು ಸದಾನಂದಗೌಡ ಅವರು ಪ್ರತಿಕ್ರಿಯಿಸಿದ್ದಾರೆ. ಆಡಿಯೋದಲ್ಲಿರುವ ಧ್ವನಿ ಸದಾನಂದಗೌಡ ಧ್ವನಿಗೆ ಸಾಮ್ಯತೆ ಇದ್ದು, ಇಂಗ್ಲಿಷ್‌ನಲ್ಲಿ ಸಂಭಾಷಣೆ ನಡೆಸಲಾಗಿದೆ. ಈ ಆಡಿಯೋ ಬಿಜೆಪಿ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

**ಆಡಿಯೋದಲ್ಲಿ ಏನಿದೆ**

ವಿಜಯೇಂದ್ರ ಅವರ ಅವಧಿ ನವೆಂಬರ್‌ವರೆಗೆ ಇದ್ದು, ಅಲ್ಲಿವರೆಗೆ ಮುಂದುವರೆಯಲಿ. ಆ ಬಳಿಕ ಕಿತ್ತು ಹಾಕಬೇಕು (ಕಿಕ್ ಹಿಮ್ ಔಟ್).



ಈಗಲೇ ತೆಗೆದರೆ ಬಿಜೆಪಿಯು ಲಿಂಗಾಯತ ವಿರೋಧಿ ಎಂಬ ಟೀಕೆಗೆ ಗುರಿ ಆಗುವ ಅಪಾಯವಿದೆ. ಅದರಿಂದ ಪಕ್ಷಕ್ಕೂಹಾನಿಯಾಗುತ್ತದೆ. ಅಕ್ಟೋಬರ್ ವರೆಗೆ ಕಾಯಬೇಕು. ಅವರ ಅವಧಿ ಮುಗಿಯುವವರೆಗೆ ಗೊಂದಲ ಮಾಡಿಕೊಳ್ಳುವ ಅಗತ್ಯ ಇಲ್ಲ. ಯೋಜನಾಬದ್ಧವಾಗಿಯೇ ಇಳಿಸಬೇಕು. ನವೆಂಬರ್‌ನಲ್ಲಿ ಅವಧಿ ಮುಗಿಯುವುದರಿಂದ ಆಗ ಇಳಿಸಿದರೆ ಯಾರೂ ಪ್ರಶ್ನೆ ಮಾಡುವುದಿಲ್ಲ. ಲಿಂಗಾಯತರು ಸ್ವಲ್ಪ ವಿರೋಧ ಮಾಡಬಹುದು. ಒಳ್ಳೆಯ ವ್ಯಕ್ತಿ ಯನ್ನು ಆಯ್ಕೆ ಮಾಡಿದರೆ ವಿರೋಧ ಗಳು ಬರುವುದಿಲ್ಲ. ಪಕ್ಷದ ಬಳಿ ಉತ್ತಮ ಆಯ್ಕೆಗಳಿದ್ದರೆ, ನಾನು ಆ ನಿರ್ಧಾರಕ್ಕೆ ಬದ್ಧನಾಗಿದ್ದೇನೆ. ನಾನು ಹೇಳುತ್ತಿರುವುದು ಸರಿಯಾಗಿದೆಯಲ್ಲವೇ? ಆಗ ಮಧ್ಯ ಪ್ರವೇಶಿಸಿ ಪ್ರದೀಪ್ ಅವರು ಮಾತನಾಡಿ, ಬಿ.ಎಲ್.ಎಸ್.(ಸಂತೋಷ್) ಆಟ ಆಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದಾಗ, ಅದು ಹಾಗಿರಲಿ ಎನ್ನುತ್ತಾರೆ. ನನ್ನನ್ನು ಜನರು ಒಪ್ಪಿಕೊಂಡಿದ್ದಾರೆ. ಬಸ್ ನಿಲ್ದಾಣದಲ್ಲಿ ನಾನು ಕಾಣಿಸಿಕೊಂಡರೆ 25 ರಿಂದ 30 ಆಟೋ ಚಾಲಕರು ಸೆಲ್ಫಿ ತೆಗೆದುಕೊಳ್ಳಲು ಬರುತ್ತಾರೆ. ಅದನ್ನು ಬಾಸ್‌ಗೆ ಹೇಳಲಾ ಎಂದೂ ಪ್ರದೀಪ್ ಪ್ರಶ್ನಿಸುತ್ತಾರೆ.

**ನಾನು ಉತ್ತರಿಸುವುದಿಲ್ಲ**

ಇದು ನನ್ನ ಆಡಿಯೋ ಅಲ್ಲ. ನಾನು ಮಾತೇ ಆಡಿಲ್ಲದ ಕಾರಣ, ಉತ್ತರ ನೀಡುವ ಅಗತ್ಯ ಇಲ್ಲವೆಂದು ಸದಾನಂದಗೌಡ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಟೀಕೆಗೆ ಪ್ರತಿಕ್ರಿಯಿಸಿದ ಗೌಡರು, ವಿಶ್ವನಾಥ್ ಮುತ್ತಪ್ಪ ರೈ ಕೈಕೆಳಗೆ ಲೂಟಿ ಹೊಡೆಯುತ್ತಿದ್ದ ವ್ಯಕ್ತಿ. ಗೂಂಡಾಗಿರಿ ಮಾಡುತ್ತಿದ್ದ ವ್ಯಕ್ತಿಯ ಬಗ್ಗೆ ನಾನೇನು ಮಾತನಾಡಲಿ. ಹಣ ಹೊಡೆಯೋದು, ಕೊಳ್ಳೆ ಹೊಡೆಯೋದೇ ಅವರ ಕೆಲಸ. ನಾನು ಒಕ್ಕಲಿಗ ಅಲ್ಲ ಎನ್ನುತ್ತಾರೆ. ಈ ಬಗ್ಗೆ ದಕ್ಷಿಣ ಕನ್ನಡದಲ್ಲಿ ಪ್ರತಿಭಟನೆ ನಡೆದಿದೆ. ಈ ವಿಷಯವನ್ನು ಪಕ್ಷದ ವರಿಷ್ಠರಿಗೆ ತಿಳಿಸುತ್ತೇನೆಂದರು.

